ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 ಸಂಚಿಕೆ 45 ನವೆಂಬರ್ 8, 1981 ಬೆಲೆ : 60 ಪೈಸೆ

ಸ್ವಾಯತ್ತತೆ ಪ್ರಶ್ನೆ

ರಾಜ್ಯಗಳಿಗೆ ಹೆಚ್ಚಿನ ಸ್ವಾಯತ್ತತೆಯನ್ನು ಕೊಡಬೇಕೆಂದೂ, ಕೇಂದ್ರದ ನಿಯಂತ್ರಣವನ್ನು ಕಡಿಮೆಗೊಳಿಸಬೇಕೆಂದೂ ರಾಷ್ಟ್ರಾಧ್ಯಕ್ಷರಾದ ಶ್ರೀ ಸಂಜೀವರೆಡ್ಡಿಯವರು ನವೆಂಬರ್ 1ರಂದು ದಿಲ್ಲಿಯಲ್ಲಿ ಸರದಾರ್ ಪಟೇಲ್ ಸ್ಮಾರಕಾರ್ಥ ಭಾಷಣದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದರು. ರಾಜ್ಯಗಳಿಗೆ ಹೆಚ್ಚು ಸಂಪನ್ಮೂಲಗಳನ್ನೊದಗಿಸಬೇಕೆಂಬುದನ್ನು ಅವರು ಒತ್ತಿ ಹೇಳಿದರು. ಈ ಬೇಡಿಕೆಯನ್ನು ಈಡೇರಿಸದಿದ್ದರೆ ಕ್ರಮೇಣ ಇದರಿಂದ ವೈಷಮ್ಯ ಬೆಳೆದು ದೇಶದ ಸಮಗ್ರತೆಗೆ ಧಕ್ಕೆ ತಗಲುವ ಅಪಾಯವಿರುವುದರಿಂದ ಈ ಪ್ರಶ್ನೆಯನ್ನು ಪರಿಶೀಲಿಸುವುದಗತ್ಯವೆಂದು ಅಭಿಪ್ರಾಯಪಟ್ಟರು.

ರಾಷ್ಟ್ರಾಧ್ಯಕ್ಷರ ಈ ಅಭಿಪ್ರಾಯವನ್ನು ಎಲ್ಲ ಪ್ರಜಾಪ್ರಭುತ್ವವಾದಿಗಳೂ ಸ್ವಾಗತಿಸುತ್ತಾರೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮೊದಲಿನಿಂದಲೂ ಈ ಅಭಿಪ್ರಾಯ ಹೊಂದಿದ್ದಲ್ಲದೆ ತನ್ನ ಕಾರ್ಯಕ್ರಮದಲ್ಲೂ, ಚುನಾವಣಾ ಘೋಷಣೆಗಳಲ್ಲೂ, ಇತರ ದಸ್ತಾವೇಜುಗಳಲ್ಲೂ ಇದನ್ನು ಪ್ರತಿಪಾದಿಸಿಕೊಂಡು ಬಂದಿದೆ. ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಭೆ ನಡೆದಾಗಲೆಲ್ಲ ನಮ್ಮ ಪಾರ್ಟಿಯ ಮುಖ್ಯಮಂತ್ರಿಗಳು ಇದನ್ನು ಪ್ರತಿಪಾದಿಸಿದಾಗ ಇತರ ಮುಖ್ಯಮಂತ್ರಿಗಳೆಲ್ಲಾ ಬೆಂಬಲಿಸುತ್ತಿದ್ದರು.

ಸಂಪಾದಕೀಯ

ಕೇಂದ್ರಸರಕಾರದ ಹಿಡಿತ ರಾಜ್ಯಗಳ ಮೇಲೆ ಕಡಿಮೆಯಾಗುವ ಬದಲು ಇತ್ತೀಚಿಗೆ ಅದು ಹೆಚ್ಚುತ್ತಿದೆ. ಆರ್ಥಿಕವಾಗಿ ರಾಜ್ಯಗಳು ಕೇಂದ್ರವನ್ನು ಸಂಪೂರ್ಣ ಅವಲಂಬಿಸಬೇಕಾದುದಲ್ಲದೆ ರಾಜ್ಯಗಳ ಆರ್ಥಿಕ ಆದಾಯ ಬರುವ ಮೂಲಗಳನ್ನು ಕೇಂದ್ರವು ಅಪಹರಿಸುತ್ತಿದೆ. ರಾಜ್ಯಗಳ ಹಕ್ಕುಗಳಿಗೆ ಚ್ಯುತಿ ತರಲಾಗುತ್ತಿದೆ. ತುರ್ತುಪರಿಸ್ಥಿತಿಯ ಕಾಲದಲ್ಲೂ ಇಂದಿರಾಗಾಂಧಿಯವರು 1980ರಲ್ಲಿ ಪುನಃ ಅಧಿಕಾರಕ್ಕೆ ಬಂದ ನಂತರವೂ ಈ ಆಕ್ರಮಣ ದಿನೇದಿನೇ ಹೆಚ್ಚುತ್ತಿದೆ. ಸರ್ವಾಧಿಕಾರದ ಅಪಾಯ ಇದರಲ್ಲಿ ಸ್ಪಷ್ಟವಾಗಿದೆ.

ರಾಷ್ಟ್ರಾಧ್ಯಕ್ಷರ ಈ ಸ್ವಾಗತಾರ್ಹ ಅಭಿಪ್ರಾಯಕ್ಕೆ ಎಲ್ಲ ಪ್ರಜಾಸತ್ತಾತ್ಮಕ ಶಕ್ತಿಗಳೂ ಬೆಂಬಲಕೊಟ್ಟಿರುವಾಗ ಕಾಂಗ್ರೆಸ್ಸಿನ ಕಾರ್ಯದರ್ಶಿ ಶ್ರೀ ಕಲ್ಪನಾಥ್ ರೇ ಯವರು ಇದನ್ನು ವಿರೋಧಿಸಿದ್ದರಲ್ಲಿ ಆಶ್ಚರ್ಯವೇನಿಲ್ಲ. ಆದರೆ ಭಾರತೀಯ ಜನತಾಪಕ್ಷವೂ ಕಾಂಗ್ರೆಸ್ಸಿನವರಂತೆ ಇದನ್ನು ವಿರೋಧಮಾಡಿರುವುದು ನಿಜವಾಗಿ ಸೋಜಿಗವೆನಿಸುತ್ತದೆ.

ದೇಶದ ಐಕ್ಯತೆಯ ದೃಷ್ಟಿಯಿಂದಲೂ, ಪ್ರಜಾಪ್ರಭುತ್ವದ ದೃಷ್ಟಿಯಿಂದಲೂ ರಾಷ್ಟ್ರಾಧ್ಯಕ್ಷರ ಅಭಿಪ್ರಾಯವನ್ನು ನಾವು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ. ೦

ನ. 23ರ ದೆಹಲಿ ಚಲೋ ಕಾರ್ಯಕ್ರಮಕ್ಕೆ

ಕೇಂದ್ರ ಸಮಿತಿಯ ಬೆಂಬಲ

ಇತ್ತೀಚೆಗೆ ದೆಹಲಿಯಲ್ಲಿ ನಡೆದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರಸಮಿತಿಯ ಸಭೆಯು, ನವೆಂಬರ್ 23ರಂದು ಪಾರ್ಲಿಮೆಂಟ್ ಚಲೋ ಕಾರ್ಯಕ್ರಮವನ್ನು ಜಂಟಿಯಾಗಿ ವ್ಯವಸ್ಥೆಗೊಳಿಸಿರುವ ರಾಷ್ಟ್ರೀಯ ಆಂದೋಲನ ಸಮಿತಿ (ಎನ್‌ಸಿಸಿ), ರಾಷ್ಟ್ರೀಯ ಒಕ್ಕೂಟಗಳನ್ನು ಅಭಿನಂದಿಸಿದೆ.

ಕಾರ್ಮಿಕ ಹಕ್ಕುಗಳನ್ನು ರಕ್ಷಿಸಲು, ಸರ್ವಾಧಿಕಾರದ ವಿರುದ್ಧ ಧೀರ ಹೋರಾಟಗಳನ್ನು ರೂಪಿಸಲು ಕಾರ್ಮಿಕವರ್ಗದ ಐಕ್ಯತೆ ಅನಿವಾರ್ಯವಾಗಿದೆ. ಸರಕಾರದ ಕಾರ್ಮಿಕ ವಿರೋಧಿ ಧೋರಣೆಗಳನ್ನು ಬಲವಾಗಿ ಪ್ರತಿಭಟಿಸಲು ರಾಷ್ಟ್ರೀಯ ಆಂದೋಲನ ಸಮಿತಿಯ ಕರೆ ಅತ್ಯಂತ ಸ್ತುತ್ಯಾರ್ಹ. ಕಾರ್ಮಿಕ ಸಂಘಗಳು ಐಕ್ಯ ಕಾರ್ಯಾಚರಣೆಯಿಂದ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸುವ ಮಹತ್ವವನ್ನು ತಿಳಿದಾಗ ಮಾತ್ರ ಜನತೆಯು ಹೋರಾಟಮಾಡಿ ಪ್ರಜಾಪ್ರಭುತ್ವವನ್ನು ಮುಂದುವರಿಸಲು ಸಾಧ್ಯ.

ಅಗತ್ಯಸೇವಾ ಕಾಯಿದೆ, ಆರನೇ ಯೋಜನೆಯಲ್ಲಿ ಬರುವ ಸಂಬಳ-ಆದಾಯದ ನೀತಿ, ಬೋನಸ್ಸು ಮತ್ತು ತುಟ್ಟಿಭತ್ತೆ ತಡೆಹಿಡಿಯುವುದು ಇವೇ ಮೊದಲಾದ ಪ್ರಜಾಪ್ರಭುತ್ವ ವಿರೋಧಿ, ಜನತೆಯ ವಿರೋಧಿ ಕ್ರಮಗಳನ್ನು ಕೇಂದ್ರಸರಕಾರ ಅನುಸರಿಸುತ್ತಿದೆ. ಈ ಧೋರಣೆಗಳನ್ನು ವಿಫಲಗೊಳಿಸಲು ತುರ್ತುಕ್ರಮ ಅನಿವಾರ್ಯ.

ವಿಪರೀತ ಏರುತ್ತಿರುವ ಜೀವನಾವಶ್ಯಕ ವಸ್ತುಗಳ ಬೆಲೆಗಳ ವಿರುದ್ಧ ಹಣದುಬ್ಬರದ ವಿರುದ್ಧ ಜನತೆಯ ಸಂಯುಕ್ತ ಪ್ರತಿಭಟನೆ ಕಂಡುಬರುತ್ತಿದೆ. ಬೆಲೆಗಳನ್ನು ಹಿಡಿತದಲ್ಲಿಡಬೇಕು, ಜೀವನಾವಶ್ಯಕ ವಸ್ತುಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಹಂಚಬೇಕು, ರೈತನು ಬೆಳೆದ ಬೆಳೆಗಳಿಗೆ ಯೋಗ್ಯಬೆಲೆ ಕೊಡಬೇಕು, ಜನತೆಯ ಮತ್ತು ರೈತವರ್ಗದ ಈ ಬೇಡಿಕೆಗಳಿಗಾಗಿ ಕಾರ್ಮಿಕವರ್ಗ ಧ್ವನಿಯೆತ್ತಿದ್ದು ಅತ್ಯಂತ ಮಹತ್ವಪೂರ್ಣವಾದುದು.

[ಕಡೇ ಪುಟ ನೋಡಿ]

ಮಹತ್ವಪೂರ್ಣ ಬೆಳವಣಿಗೆ

ಅಖಿಲ ಭಾರತ ಕೃಷಿಕಾರ್ಮಿಕರ ಸಂಘಟನೆ ಅಸ್ತಿತ್ವಕ್ಕೆ

ಕೃಷಿಕಾರ್ಮಿಕರು ಕೃಷಿಕ್ಷೇತ್ರದ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸುವವರಿದ್ದಾರಲ್ಲದೇ ನಗರ ಪ್ರದೇಶದ ದುಡಿಯುವ ವರ್ಗಕ್ಕೂ, ರೈತ ಸಮುದಾಯಕ್ಕೂ ಸಂಬಂಧದ ಕೊಂಡಿಗಳಾಗಿದ್ದಾರೆ. ಇವರು ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಅತ್ಯಂತ ದುರ್ಭರ ಶೋಷಣೆಗೊಳಪಟ್ಟವರು; ಹಿಂದುಳಿದ ವರ್ಗಪಂಗಡಕ್ಕೆ ಸೇರಿದ ಈ ಜನರು ಹಿಂದೂ ಸಾಂಪ್ರದಾಯಿಕ ವರ್ಗದಿಂದ ದೌರ್ಜನ್ಯಕ್ಕೊಳಗಾಗದ ದಿನವೇ ಇಲ್ಲ.

20 ಅಂಶದ ಆರ್ಥಿಕ ಕಾರ್ಯಕ್ರಮಗಳ ತುತ್ತೂರಿ ಊದಿದ ಕಾಂಗ್ರೆಸ್ಸಿನವರು ನಿರೀಕ್ಷಿತವಾದ ಪರಿಹಾರವನ್ನೇನೂ ತರಲಿಲ್ಲ; ಮೇಲಾಗಿ ನೀಡಿದ ಭರವಸೆಗಳನ್ನೂ ಗಾಳಿಗೆ ತೂರಿಬಿಟ್ಟರು. ಸ್ವಾತಂತ್ರ್ಯ ನಂತರ ಮೂರುವರೆ ದಶಕದ ಈ ದಿನವೂ ಸಹ ಈ ಕೃಷಿಕಾರ್ಮಿಕರು ಗುಲಾಮಗಿರಿಯಲ್ಲಿ ಬಳಲುತ್ತಿದ್ದಾರೆ; ವಸತಿ ನಿವೇಶನಗಳಿಂದ ವಂಚಿತರಾಗಿದ್ದಾರೆ; ಲೇವಾದೇವಿದಾರರಿಂದ ಬಂಧಿತರಾಗಿದ್ದಾರೆ; ಅತ್ಯಂತ ಕಡಿಮೆ ಕೂಲಿಯನ್ನು ಪಡೆಯುವವರಾಗಿದ್ದಾರೆ; ಜೊತೆಗೆ ಹಿಂಸಾತ್ಮಕ ದೌರ್ಜನ್ಯಗಳಿಗೆ ಒಳಗಾಗಿದ್ದಾರೆ. ಆಳುವ ಪಕ್ಷದ ಭೂಸುಧಾರಣಾ ಕಾನೂನು ಇವರಿಗೆ ಭದ್ರತೆಯನ್ನಾಗಲೀ ಪರಿಹಾರವನ್ನಾಗಲೀ ಕೊಡಲು ವಿಫಲವಾಗಿರುವುದರೊಂದಿಗೇ ಕೃಷಿಕ್ಷೇತ್ರದಲ್ಲಿ ನಿರುದ್ಯೋಗವನ್ನೂ ಬೆಳೆಸುತ್ತಿದೆ. 1971ರ ಜನಸಂಖ್ಯಾಗಣನೆಯ ವರದಿಯಂತೆ ಕೃಷಿಕಾರ್ಮಿಕರ ಸಂಖ್ಯೆ ಒಟ್ಟು ಜನಸಂಖ್ಯೆಯ ಶೇ. 16ರಿಂದ 25ಕ್ಕೇರಿದೆ. ಗ್ರಾಮಾಂತರವಾಗಿ ಮಾತ್ರ ಗಣನೆಗೆ ತೆಗೆದುಕೊಂಡರೆ ಈ ಸಂಖ್ಯೆ ಇನ್ನೂ ಹೆಚ್ಚುತ್ತದೆ. ಶೇ. 64ರಷ್ಟು ಕೃಷಿಕೂಲಿ ಕುಟುಂಬಗಳು ಸಾಲದ ಹೊರೆಯನ್ನು ಹೊತ್ತಿವೆ. ನ್ಯಾಷನಲ್ ಲೇಬರ್ ಇನ್‌ಸ್ಟಿಟ್ಯೂಟ್ (NLI)ನ ಸಮೀಕ್ಷೆಯು ದೇಶದ 9 ರಾಜ್ಯಗಳಲ್ಲಿ 23ಲಕ್ಷ ಜನ ಜೀತಗಾರಿಕೆಯಲ್ಲಿ ಇರುವರೆಂದು ತಿಳಿಸುತ್ತದೆ. ಅವರಲ್ಲಿ 101,972ರಷ್ಟು ಜನರನ್ನು ಮಾತ್ರ ಮಾರ್ಚ್ 1978ರವರೆಗೆ ಸರಕಾರ ಗುರುತಿಸಿತ್ತು.

ದಿನವೊಂದಕ್ಕೆ 12ರಿಂದ 16ಘಂಟೆ ಕೆಲಸ ಮಾಡಬೇಕಾದ ಈ ಕೃಷಿಕಾರ್ಮಿಕರಿಗೆ ಹೆಚ್ಚಿನಂಶ ರಾಜ್ಯಗಳಲ್ಲಿ ಕನಿಷ್ಟ ವೇತನ ಕಾನೂನನ್ನು ಸರಕಾರ ಜಾರಿಗೊಳಿಸಿಲ್ಲ. ಮತ್ತು ಅವರಿಗೆ ಯಾವುದೇ ಭದ್ರತೆ ನೀಡಿಲ್ಲ. ಬದಲಾಗಿ ತಮ್ಮ ಬೇಡಿಕೆಗಳಿಗೆ ಉತ್ತರವಾಗಿ ಗುಂಡೇಟುಗಳನ್ನು ಪಡೆಯುತ್ತಿದ್ದಾರೆ.

ಪಶ್ಚಿಮ ಬಂಗಾಳ, ತ್ರಿಪುರ ಮತ್ತು ಕೇರಳ ರಾಜ್ಯಗಳಲ್ಲಿ ಮಾತ್ರ ಪ್ರಾಮಾಣಿಕ ಪ್ರಯತ್ನ ನಡೆದು ಕೂಲಿಯ ವೇತನ ಹೆಚ್ಚಳ, ವಯೋವೃದ್ಧ ಕೃಷಿಕೂಲಿಗಳಿಗೆ ವಿಶ್ರಾಂತಿ ವೇತನ ಋಣ ಪರಿಹಾರ, ಗೃಹ ನಿವೇಶನಗಳ ಹಂಚಿಕೆ ಕಾರ್ಯಕ್ರಮಗಳ ಪ್ರಯೋಜನವನ್ನು ಕೃಷಿಕಾರ್ಮಿಕರು ಪಡೆದಿದ್ದಾರೆ.

ದೇಶದ ವಿವಿಧ ಭಾಗಗಳಲ್ಲಿ ಕೃಷಿಕಾರ್ಮಿಕರನ್ನು ಸಂಘಟಿಸುತ್ತಿರುವ ಸಂಘಟನೆಗಳನ್ನೆಲ್ಲ ಒಂದೇ ವೇದಿಕೆಯ ಮೇಲೆ ತರಬೇಕೆಂಬ ಪ್ರಯತ್ನ ಅನೇಕ ದಿನಗಳಿಂದ ನಡೆಯುತ್ತಿತ್ತು. ಈ ಪ್ರಯತ್ನದ ಅಂಗವಾಗಿ ಆಂಧ್ರದ ವಿಜಯವಾಡದಲ್ಲಿ ಅಕ್ಟೋಬರ್ 12 ಮತ್ತು 13ರಂದು ಕೃಷಿಕಾರ್ಮಿಕರ ಸಂಘಟನೆಗಳ ಮುಖಂಡರು ಸಭೆ ಸೇರಿ ಅಖಿಲ ಭಾರತ ಕೃಷಿಕಾರ್ಮಿಕರ ಒಕ್ಕೂಟವನ್ನು ಹುಟ್ಟುಹಾಕಿದರು: ಕೃಷಿಕಾರ್ಮಿಕರ ಈ ಹೊಸ ಸಂಘಟನೆ (ಎ.ಐ.ಎ.ಡಬ್ಲ್ಯು.ಯು.)ಯು ಅಖಿಲಭಾರತ ಕಿಸಾನಸಭಾ (ಎ.ಐ.ಕೆ.ಎಸ್.)ದ ನಿಕಟ ಸಹಕಾರದೊಡನೆ ಕಾರ್ಯರಂಗಕ್ಕೆ ಇಳಿದಿದೆ.

ಅಖಿಲಭಾರತ ಕೃಷಿಕಾರ್ಮಿಕರ ಒಕ್ಕೂಟದ ಅಧ್ಯಕ್ಷರಾಗಿ ಆಂಧ್ರಪ್ರದೇಶದ ಕಾಂ. ಟಿ. ವಿ. ಆರ್. ಚಂದ್ರಮ್ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಕೇರಳದ ಕಾಂ. ಪಿ. ಕೆ. ಕುಂಞಚ್ಚನ್ ಆಯ್ಕೆಯಾಗಿದ್ದಾರೆ.

ಕೃಷಿಕಾರ್ಮಿಕರ ಅಖಿಲಭಾರತ ಸಂಘಟನೆ ರೂಪಗೊಂಡ ಈ ಸಭೆಯಲ್ಲಿ ಅಖಿಲಭಾರತ ಕಿಸಾನಸಭಾದ

[ಕಡೇ ಪುಟ ನೋಡಿ]

ಜಗತ್ತಿನಾದ್ಯಂತ ಕಾರ್ಮಿಕವರ್ಗದ ಹೋರಾಟಗಳಿಗೆ, ರಾಷ್ಟ್ರೀಯ ವಿಮೋಚನಾ ಸಮರಗಳಿಗೆ ಸ್ಫೂರ್ತಿ ನೀಡಿದ

ಮಹಾನ್ ಅಕ್ಟೋಬರ ಕ್ರಾಂತಿ

ನವೆಂಬರ್ 7, 1981ಕ್ಕೆ ಮಹಾನ್ ಅಕ್ಟೋಬರ್ ಕ್ರಾಂತಿ ನಡೆದು 64 ವರ್ಷಗಳಾದವು. ತಮ್ಮ ದೇಶದಲ್ಲಿ ಬಂಡವಾಳಶಾಹಿಯನ್ನು ಕೊನೆಗಾಣಿಸುವ, ವಿಶ್ವದ ಸಾಮ್ರಾಜ್ಯಶಾಹಿ ಪದ್ಧತಿಗೆ ಧಕ್ಕೆಯನ್ನುಂಟುಮಾಡುವ ಮೂಲಕ ರಷಿಯಾದ ಜನತೆ ಕಾಂ. ಲೆನಿನ್‌ರ ನೇತೃತ್ವದಲ್ಲಿ ನಡೆಸಿದ ಮಹಾನ್ ಕ್ರಾಂತಿ ಜಗತ್ತಿನಾದ್ಯಂತ ಕಾರ್ಮಿಕವರ್ಗದ ಹೋರಾಟಗಳಿಗೆ, ರಾಷ್ಟ್ರೀಯ ವಿಮೋಚನಾ ಸಮರಗಳಿಗೆ, ಮಾನವ ಕುಲದ ಪುರೋಗಮನ ಪರಿಶ್ರಮಗಳಿಗೆಲ್ಲ ಸ್ಫೂರ್ತಿ, ದಿಗ್ದರ್ಶನ, ಬೆಂಬಲಗಳನ್ನು ನೀಡುತ್ತ ಬಂದಿದೆ.

ಕಮ್ಯುನಿಸ್ಟ್ ಪಕ್ಷದ ಘೋಷಣೆ (Manifesto of the Communist Party)ಯಲ್ಲಿ ಮಾರ್ಕ್ಸ್ ಮತ್ತು ಎಂಗೆಲ್ಸರು ಈ ರೀತಿ ಬರೆದಿದ್ದಾರೆ: ಕಾರ್ಮಿಕ ವರ್ಗದಿಂದಾಗುವ ಕ್ರಾಂತಿಯಲ್ಲಿ ಮೊದಲನೆ ಹೆಜ್ಜೆಯೆಂದರೆ, ಕಾರ್ಮಿಕ ವರ್ಗವನ್ನು ಅಧಿಕಾರ ವರ್ಗವಾಗಿ ಏರಿಸುವದು, ಪ್ರಜಾಪ್ರಭುತ್ವದ ಹೋರಾಟವನ್ನು ಗೆಲ್ಲುವುದು ಆಗಿದೆ."

ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ಬರಹವನ್ನು ಕಾರ್ಯರೂಪಕ್ಕೆ ತರುವ ಮೊದಲ ಪ್ರಯತ್ನ ನಡೆದುದು ಫ್ರಾನ್ಸ್‌ನಲ್ಲಿ. 1871ರಲ್ಲಿ ಪ್ಯಾರೀಸ್‌ನಲ್ಲಿ ವಿರೋಚಿತ ಕಾರ್ಮಿಕವರ್ಗ ಶೋಷಣೆಗಾರರ ಶೃಂಖಲೆಗಳನ್ನು ಕಿತ್ತೆಸೆದು ಅಧಿಕಾರವನ್ನು ಕೈವಶಮಾಡಿಕೊಂಡರು. ಜಗತ್ತಿನ ಇತಿಹಾಸದಲ್ಲಿ ಮೊಟ್ಟಮೊದಲಬಾರಿಗೆ ದುಡಿಮೆಗಾರರ ಆಡಳಿತವನ್ನು ತರುವ ದಿಸೆಯಲ್ಲಿ ಪ್ರಯತ್ನ ನಡೆಯಿತು. ಈ ಘಟನೆ "ಪ್ಯಾರೀಸ್ ಕಮ್ಯೂನ್" ಎಂದು ಇತಿಹಾಸದಲ್ಲಿ ಅಜರಾಮರವಾಗಿ ನಿಂತಿದೆ. ಆದರೆ ದೂರದೃಷ್ಟಿಯಿಲ್ಲದ ಬಂಡಾಯಗಾರರ ಕೆಲವು ತಪ್ಪು ಕ್ರಮಗಳಿಂದ ಈ ಬಂಡಾಯ ವಿಫಲವಾಯಿತು. (1871 ಮಾರ್ಚ್ 18ರಿಂದ ಮೇ 28ರವರೆಗೆ 72ದಿನ ಪ್ಯಾರೀಸ್ ಕಾರ್ಮಿಕರ ಕೈವಶದಲ್ಲಿತ್ತು.) ಪ್ಯಾರೀಸ್ ಕಮ್ಯೂನ್ ವಿಫಲವಾದರೂ ಅದು ಕಾರ್ಮಿಕವರ್ಗದ ಹೊಸ ಬದುಕಿನ ಪ್ರಯತ್ನದ ಪ್ರತೀಕವಾಗಿ ಉಳಿಯಿತು.

ಬಂಡಾಯವನ್ನು ಹತ್ತಿಕ್ಕಿದ ಫ್ರಾನ್ಸ್‌ನ ಬೂರ್ಜ್ವಾವರ್ಗ "ಸಮಾಜವಾದವನ್ನು ಶಾಶ್ವತವಾಗಿ ಸದೆಬಡೆಯಲಾಗಿದೆ" ಎಂದು ಸಾರಿತು. ಅವರು ಮೂರ್ಖರ ಸ್ವರ್ಗದಲ್ಲಿ ವಿಹರಿಸುತ್ತಿದ್ದರು. ಪ್ಯಾರೀಸ್ ಕಮ್ಯೂನಿನ ಮಹತ್ವವನ್ನು ಬೂರ್ಜ್ವಾಗಳು ಅರ್ಥಮಾಡಿಕೊಂಡಿರಲಿಲ್ಲ.

ಪ್ಯಾರೀಸ್ ಕಮ್ಯೂನ್ ವಿಫಲವಾದುದರ ಕುರಿತು ಮಾರ್ಕ್ಸ್‌ರು ಈ ರೀತಿ ಬರೆದರು. "ಕಾರ್ಮಿಕವರ್ಗವು ರಾಜ್ಯವ್ಯವಸ್ಥೆಯನ್ನು (State Power) ಕೈವಶ ಮಾಡಿಕೊಂಡರೆ ಮಾತ್ರ ಸಾಲದು; ಅಧಿಕಾರಶಾಹಿ ಮಿಲಿಟರಿ ಶಕ್ತಿಯನ್ನು ನಾಶಮಾಡಿ ಕಾರ್ಮಿಕ ವರ್ಗದ ಸರ್ವಾಧಿಕಾರವನ್ನು ಸ್ಥಾಪಿಸಬೇಕು. ಮತ್ತು ಶ್ರಮಿಕವರ್ಗ ತನ್ನದೇ ಸಂಸ್ಥೆ - ಸಂಘಟನೆಗಳ ಮೂಲಕ ಹೊಸ ಆಡಳಿತ ವ್ಯವಸ್ಥೆಯನ್ನು ಕಟ್ಟಿಕೊಳ್ಳಬೇಕು."

ಪ್ಯಾರೀಸ್ ಕಮ್ಯೂನಿನ ಆದರ್ಶ, ಆಶಯಗಳು 46 ವರ್ಷಗಳ ನಂತರ 1917ರಲ್ಲಿ ರಷಿಯಾದಲ್ಲಿ ಬೋಲ್ಶೆವಿಕ್ ಪಾರ್ಟಿಯ ನಾಯಕತ್ವದಲ್ಲಿ, ಕಾಂ. ಲೆನಿನ್‌ರ ಮಾರ್ಗದರ್ಶನದಲ್ಲಿ ಸಾಕಾರ ರೂಪತಳೆದವು.

ಸಮಾಜವಾದದ ಇತಿಹಾಸದಲ್ಲಿ ಅಕ್ಟೋಬರ್ ಕ್ರಾಂತಿಯು ಒಂದು ನವೋದಯವನ್ನು ಆರಂಭಿಸಿತು. ಝಾರನ ಕಪಿಮುಷ್ಠಿಯಲ್ಲಿ ನಲುಗಿ ನುಗ್ಗಾದ ಜನತೆ ಝಾರಶಾಹಿಯನ್ನು ಕಿತ್ತೆಸೆಯಿತು. ರಶಿಯಾದ ಝಾರ ಪ್ರಭುತ್ವದ ಕೋಟೆಗಳು ಕುಸಿದು ಬಿದ್ದವು. ಶತಮಾನಗಳಿಂದ ರಶಿಯಾದ ಜನತೆಯನ್ನು ನಿಗ್ರಹಿಸಿಟ್ಟಿದ್ದ ನಿರಂಕುಶ ಅಧಿಕಾರವನ್ನು ಜನತೆ ತೊಡೆದುಹಾಕಿತು. ಝಾರನ ದಮನಕಾರಿ ಆಡಳಿತದಿಂದ ಬಹಳ ಕಾಲ ಕಾದಿದ್ದ ಬಿಡುಗಡೆ ನವೆಂಬರ್ 7ರಂದು ಕೈಗೂಡಿತ್ತು.

ಅಕ್ಟೋಬರ್ ಕ್ರಾಂತಿಯು ಬಂಡವಾಳಶಾಹಿ ವ್ಯವಸ್ಥೆಯು ಶಾಶ್ವತವೆಂದುಕೊಂಡಿದ್ದ ಆಳುವವರ್ಗಗಳ ಕಲ್ಪನೆಯನ್ನು ನುಚ್ಚುನೂರು ಮಾಡಿತು. ಬಂಡವಾಳಶಾಹಿ ಸರಪಳಿ ಮೊಟ್ಟಮೊದಲ ಬಾರಿಗೆ ಕಳಚಿಬಿದ್ದಿತು.

ಮಾರ್ಕ್ಸ್ ಮತ್ತು ಎಂಗೆಲ್ಸರು "ಕಮ್ಯುನಿಸ್ಟ್ ಘೋಷಣೆ"ಯಲ್ಲಿ ಸ್ಪಷ್ಟವಾಗಿ ಬರೆದಿದ್ದರು: "ಬಂಡವಾಳಶಾಹಿಯು ತನ್ನ ಅವಸಾನವನ್ನು ತರುವಂತಹ ಶಸ್ತ್ರಗಳನ್ನು ಸ್ವತಃ ತಾನೇ ಸಿದ್ಧಪಡಿಸಿರುವುದು. ಅಷ್ಟೇ ಅಲ್ಲ, ಈ ಶಸ್ತ್ರಗಳನ್ನು ಉಪಯೋಗಿಸುವ ಜನರನ್ನು ಕೂಡ-ಆಧುನಿಕ ಕಾರ್ಮಿಕವರ್ಗವನ್ನು ಅದು ಸೃಷ್ಟಿಸಿದೆ".

ಕಮ್ಯುನಿಸ್ಟ್ ಘೋಷಣೆ ಸಿದ್ಧಪಡಿಸಿದ 69 ವರ್ಷಗಳ ನಂತರ ಮಾರ್ಕ್ಸ್ ಮತ್ತು ಎಂಗೆಲ್ಸರ ಭವಿಷ್ಯವಾಣಿ ನಿಜವಾಯಿತು. ಬಂಡವಾಳಗಾರರಿಂದ ಎಲ್ಲ ಬಂಡವಾಳವನ್ನೂ ಕಿತ್ತುಕೊಂಡು, ಉತ್ಪಾದನೆಯ ಎಲ್ಲ ಉಪಕರಣಗಳನ್ನು ಪ್ರಭುತ್ವದ ಹಿಡಿತದಲ್ಲಿ ಅಂದರೆ ಆಳುವವರ್ಗವಾಗಿ ಸಂಘಟಿತವಾದ ಕಾರ್ಮಿಕವರ್ಗದ ಹಿಡಿತದಲ್ಲಿ ಕೇಂದ್ರೀಕರಿಸುವುದಕ್ಕಾಗಿ ಕಾರ್ಮಿಕವರ್ಗದ ಮಹಾನ್ ಹೋರಾಟವು ರಶಿಯಾದಲ್ಲಿ ಮಹಾನ್ ಅಕ್ಟೋಬರ್ ಕ್ರಾಂತಿಯ ವಿಜಯದಲ್ಲಿ ಪರ್ಯಾವಸಾನಗೊಂಡಿತು. ವಿಶ್ವದ ಬೇರೆಬೇರೆ ಕಡೆಗಳಲ್ಲಿ ಶೋಷಕರ ವಿರುದ್ಧ ಹೋರಾಡುತ್ತಿದ್ದ ದುಡಿಯುವ ಜನತೆಗೆ ಆಶಾದೀವಿಗೆಯಾಯಿತು.

1917ಕ್ಕೂ ಮೊದಲು ಅನೇಕ ಬಂಡಾಯಗಳು ವಿಶ್ವದ ಕೆಲವೆಡೆ ನಡೆದಿದ್ದವು. ಆದರೆ ಅವು ಯಾವುವೂ ಶೋಷಕವರ್ಗಗಳ ವಿರುದ್ಧ ದುಡಿಮೆಗಾರರ ಜಯದಲ್ಲಿ ಪರಿಣಮಿಸಿರಲಿಲ್ಲ. ಅಕ್ಟೋಬರ್ ಕ್ರಾಂತಿಯಿಂದಾಗಿ ಶೋಷಕರ ಆಡಳಿತ, ಸಾಮಾಜಿಕ ಮತ್ತು ರಾಷ್ಟ್ರೀಯ ದಬ್ಬಾಳಿಕೆಯನ್ನು ವಿಶ್ವದ ಆರನೇ ಒಂದು ಪ್ರದೇಶದಲ್ಲಿ ಕೊನೆಗಾಣಿಸಲಾಯಿತು. ಜನತೆಗೆ ರಾಜಕೀಯ ಹಕ್ಕುಗಳನ್ನು ದೊರಕಿಸುವುದರ ಜೊತೆಗೆ ಅವರ ಸರ್ವತೋಮುಖ ವಿಕಾಸಕ್ಕೆ ದಾರಿಯನ್ನುಂಟುಮಾಡಿತು. ಸಾಮ್ರಾಜ್ಯಶಾಹಿಯ ಪ್ರಥಮ ವಿಶ್ವಸಂಗ್ರಾಮದ ರಕ್ತಪಾತದಿಂದ ರಷ್ಯವನ್ನು ಹೊರಕ್ಕೆ ತಂದಿತು.


ವಿಶ್ವದಲ್ಲೊಂದು ಹೊಂಬೆಳಕನ್ನು ಮೂಡಿಸಿದ ಅಕ್ಟೋಬರ್ ಕ್ರಾಂತಿಯು ಬಂಡವಾಳಶಾಹಿ ಸಮಾಜವನ್ನು ಅಲ್ಲಾಡಿಸಿತು. ರಶಿಯಾದಲ್ಲಿ ವಿಜಯಿಯಾದ ದುಡಿಯುವ ವರ್ಗದ ಕ್ರಾಂತಿಯು ವಿವಿಧ ದೇಶಗಳ ರಾಷ್ಟ್ರೀಯ ಹೋರಾಟಗಳ ಮೇಲೆ ಅಪಾರ ಪರಿಣಾಮ ಬೀರಿತು. ವಸಾಹತು ಮತ್ತು ಅರೆವಸಾಹತು ದೇಶಗಳಲ್ಲಿ ಹೋರಾಡುತ್ತಿದ್ದ ಕ್ರಾಂತಿಕಾರಿಗಳಿಗೆ ಅಕ್ಟೋಬರ್ ಕ್ರಾಂತಿಯು ಮಾರ್ಗದರ್ಶಿಯಾಯಿತು.

ವಿವಿಧ ದೇಶಗಳಲ್ಲಿ ಹೋರಾಡುತ್ತಿದ್ದ ಕ್ರಾಂತಿಕಾರಿಗಳಿಗೆ ಕ್ರಾಂತಿಯ ಕುರಿತು, ಕ್ರಾಂತಿಯನ್ನು ಸಂಘಟಿಸುವುದರ ಕುರಿತು ಸ್ಪಷ್ಟತೆ ನೀಡಿತು. ಎಲ್ಲ ರೀತಿಯ ದಬ್ಬಾಳಿಕೆ ಮತ್ತು ಶೋಷಣೆಯ ವಿರುದ್ಧ ಶ್ರಮಜೀವಿಗಳ ವಿಶ್ವವ್ಯಾಪೀ ಹೋರಾಟದ ಒಂದು ಭಾಗವಾಯಿತು. ವಸಾಹತುಶಾಹಿಗೆ ಮತ್ತು ಗುಲಾಮಗಿರಿಗೆ ಒಳಗಾದ ಜನತೆಗೆ ಹೊಸ ಚೇತನವನ್ನುಂಟುಮಾಡಿತು. ಹೊಸ ಬದುಕಿನ ಭರವಸೆಯನ್ನು ಹುಟ್ಟಿಸಿತು.

ಇಡೀ ದುಡಿಮೆಗಾರರ ವರ್ಗಕ್ಕೆ ಕಾರ್ಮಿಕವರ್ಗ ಮತ್ತು ಅದರ ಮಾರ್ಕ್ಸಿಸ್ಟ್ – ಲೆನಿನಿಸ್ಟ್ ಪಕ್ಷದ ಮಾರ್ಗದರ್ಶನವಿಲ್ಲದೇ ಸಮಾಜವಾದಿ ಕ್ರಾಂತಿಯನ್ನುಂಟುಮಾಡಲು ಸಾಧ್ಯವಿಲ್ಲವೆಂಬುದನ್ನು ಅಕ್ಟೋಬರ್ ಸಮಾಜವಾದಿ ಕ್ರಾಂತಿಯು ಎತ್ತಿ ತೋರಿಸಿತು. ಶೋಷಣೆಯ ಆಧಾರದ ಮೇಲೆ ನಿರ್ಮಿತವಾದ ಸಾಮಾಜಿಕ ಪದ್ಧತಿಯನ್ನು ಕಿತ್ತುಹಾಕಿ ಸಮಾಜವಾದಿ ಸಮಾಜ ನಿರ್ಮಾಣದ ಹೋರಾಟದಲ್ಲಿ ವಿಜಯ ದೊರಕಬೇಕಾದರೆ ಕಮ್ಯುನಿಸ್ಟ್ ಪಕ್ಷದ ಸ್ವರೂಪದಲ್ಲಿ ವ್ಯವಸ್ಥಿತ ಕ್ರಾಂತಿಕಾರಿ ಮುಂಚೂಣಿ ಇರಬೇಕಾದ ಅಗತ್ಯವನ್ನು ಅಕ್ಟೋಬರ್ ಕ್ರಾಂತಿಯು ಮನಗಾಣಿಸಿತು.

ಬಂಡವಾಳಶಾಹಿ ಶಕ್ತಿಗಳ ವಿರುದ್ಧ ಹೋರಾಟ ನಡೆಸಿದ ರಷ್ಯಾದ ಕಾರ್ಮಿಕ ವರ್ಗವು ದೇಶದ ಬಹುತೇಕ ಜನಸಮುದಾಯದ ಹಿತಾಸಕ್ತಿಯನ್ನು ಅಭಿವ್ಯಕ್ತಗೊಳಿಸಿತು. ಆದರಿಂದಾಗಿಯೇ ಶ್ರಮಜೀವಿಗಳ ವ್ಯಾಪಕ ಸಮುದಾಯವು ಕಾರ್ಮಿಕವರ್ಗಕ್ಕೆ ಬೆಂಬಲವಾಗಿ ನಿಂತು ಸಮಾಜವಾದದತ್ತ ಸಾಗುವ ಪಥದಲ್ಲಿ ಮುನ್ನಡೆಯಿತು. 1917ರ ಅಕ್ಟೋಬರ ಸಮಾಜವಾದಿ ಕ್ರಾಂತಿಯ ವಿಜಯಕ್ಕೆ ಇದೇ ಮೂಲ ಪ್ರೇರಕ ಶಕ್ತಿಯಾಯಿತು.

(7ನೇ ಪುಟ ನೋಡಿ)



"ಬಂಡವಾಳಶಾಹಿ ಪದ್ಧತಿಯ ಕಾಲದ ದಾಖಲೆಗಳು ಮತ್ತು ಸ್ಮಾರಕಗಳನ್ನು ನಮ್ಮ ಮೊಮ್ಮಕ್ಕಳು ಆಶ್ಚರ್ಯದಿಂದ ಎವೆಯಿಕ್ಕದೇ ನೋಡುವವು. ಜೀವನದ ಅತ್ಯಗತ್ಯ ವಸ್ತುಗಳ ವ್ಯಾಪಾರ ಖಾಸಗಿಯವರ ಕೈಯ್ಯಲ್ಲಿರಲು ಹೇಗೆ ಸಾಧ್ಯವಾಗಿತ್ತು? ಕಾರ್ಖಾನೆಗಳು ಮತ್ತು ಯಂತ್ರಗಳು ವ್ಯಕ್ತಿಗಳ ಒಡೆತನವಲ್ಲಿರಲು ಹೇಗೆ ಸಾಧ್ಯವಾಗಿತ್ತು? ಒಬ್ಬ ಮನುಷ್ಯ ಮತ್ತೊಬ್ಬ ಮನುಷ್ಯನನ್ನು ಶೋಷಿಸಲು ಹೇಗೆ ಸಾಧ್ಯವಾಗಿತ್ತು? ಎಂಬುದನ್ನು ತಮ್ಮ ಮನಸ್ಸಿನಲ್ಲಿ ಚಿತ್ರಿಸಿಕೊಳ್ಳಲು ಆ ಮಕ್ಕಳಿಗೆ ತುಂಬ ಕಷ್ಟವಾಗುವುದು. ನಮ್ಮ ಮಕ್ಕಳು ಕಾಣಲಿರುವ ವಿಚಾರಗಳನ್ನು ಈವರೆಗೆ ಕಟ್ಟುಕಥೆಗಳಂತೆ ಹೇಳಲಾಗುತ್ತಿತ್ತು".

"ಆದರೆ ಈಗ ಕಾಮ್ರೇಡ್‌ಗಳೇ!, ನಾವು ಈಗ ಸಮಾಜವಾದಿ ಸಮಾಜದ ಸೌಧಕ್ಕಾಗಿ ಹಾಕಿರುವ ಬುನಾದಿಯು ಕೇವಲ ಕಾಲ್ಪನಿಕವಲ್ಲವೆಂಬುದನ್ನು ನೀವು ಸ್ಪಷ್ಟವಾಗಿ ಕಾಣುತ್ತಿದ್ದೀರಿ. ಈ ಸೌಧದ ನಿರ್ಮಾಣದಲ್ಲಿ ನಮ್ಮ ಮಕ್ಕಳು ಇನ್ನೂ ಹೆಚ್ಚು ಸತ್ವಶಾಲಿಗಳಾಗಿರುತ್ತಾರೆ".

—ಲೆನಿನ್

(1919ರ ಮೇ ಒಂದರಂದು ಜನತೆಯನ್ನುದ್ದೇಶಿಸಿ ಮಾಸ್ಕೋದ ಕೆಂಪುಚೌಕದಲ್ಲಿ ಮಾಡಿದ ಭಾಷಣದಿಂದ)

ಮಿಂಚಿನಬಳ್ಳಿಯ ಬಿಂದು ಮಾಧವ ಇನ್ನಿಲ್ಲ

ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಮಿಂಚಿನಬಳ್ಳಿ ಪ್ರಕಾಶನ ಸಂಸ್ಥೆಯ ಸಂಸ್ಥಾಪಕ ಬುರ್ಲಿಬಿಂದು ಮಾಧವರು ಮಂಗಳವಾರ (ಅಕ್ಟೋಬರ್ 27) ರಾತ್ರಿ ನಿಧನರಾಗಿದ್ದಾರೆ.

ಸ್ವಾತಂತ್ರ್ಯ ಸಮರದಲ್ಲಿ ಸಕ್ರಿಯ ಪಾತ್ರವಹಿಸಿದ್ದ ಬುರ್ಲಿಯವರು ಕರ್ನಾಟಕ ಏಕೀಕರಣಕ್ಕೂ ಅಮೂಲ್ಯ ಸೇವೆ ಸಲ್ಲಿಸಿದ್ದರು.

ತಮ್ಮ ಪ್ರಕಾಶನ ಸಂಸ್ಥೆಯಲ್ಲಿ "ಮಾರ್ಕ್ಸ್‌ವಾದ ಮತ್ತು ಸಾಮ್ಯವಾದ" "ಸತ್ವಶಾಲೀ ರಷ್ಯ" ಮೊದಲಾದ ಗ್ರಂಥಗಳನ್ನು ಪ್ರಕಟಿಸಿದ್ದರು.

ಪ್ರಾಮಾಣಿಕ ರಚನಾತ್ಮಕ ಚಳುವಳಿಯ ಕಾರ್ಯಕರ್ತ ಬುರ್ಲಿಬಿಂದು ಮಾಧವರ ನಿಧನಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಸಂತಾಪ ವ್ಯಕ್ತಪಡಿಸಿದೆ.

○

ಸಾದತ್ ಕೊಲೆಯ ನಂತರ

ಅನ್ವರ್ ಸಾದತ್‌ರಿಗೆ ಈಜಿಪ್ಟಿನ ಬಹುಸಂಖ್ಯಾತ ಜನತೆಯ ಸಂಪೂರ್ಣ ಬೆಂಬಲವಿದೆಯೆಂದು ಸಾಮ್ರಾಜ್ಯಶಾಹಿಗಳ ಹಾಗೂ ಅವರ ಗೆಳೆಯರ, ಬಾಲಬಡುಕರ ಪತ್ರಿಕೆಗಳು ಹೇಳುತ್ತಿದ್ದವು. ಈಜಿಪ್ಟಿಗೆ ಕಟ್ಟಕಡೆಗಾದರೂ ಶಾಂತಿ, ನೆಮ್ಮದಿ ದೊರಕಿಸಿಕೊಟ್ಟವರು ಎಂದು ಅವರನ್ನು ಪ್ರಶಂಸಿಸಲಾಗುತ್ತಿತ್ತು. ಆದರೆ ಸಾದತ್‌ರ ಕೊಲೆ ಇವನ್ನೆಲ್ಲಾ ಸುಳ್ಳಾಗಿಸಿದೆ.

ಸಾದತ್‌ರ ಕೊಲೆಯಾದದ್ದು ಒಬ್ಬ ಮುಸ್ಲಿಂ ಧರ್ಮಾಂಧನ ನೇತೃತ್ವದಲ್ಲಿದ್ದ ಸೈನಿಕರ ಒಂದು ಸಣ್ಣ ಗುಂಪಿನಿಂದ ಮಾತ್ರ. ಇದರಲ್ಲಿ ಯಾವುದಾದರೂ ದೇಶದ ಅಥವಾ ಗುಂಪಿನ ಸಂಚೇನೂ ಇಲ್ಲ ಎಂದು ಈಜಿಪ್ಟಿನ ಸರಕಾರ ಹೇಳುತ್ತಿದೆ. ಆದರೆ ವಾಸ್ತವ ಸಂಗತಿ ಇಷ್ಟು ಸರಳವಾಗಿರಲಿಕ್ಕಿಲ್ಲ ಎಂದೆನಿಸುತ್ತಿದೆ.

ಅರಬರು ದೂರವಿದ್ದರು

ಅಕ್ಟೋಬರ್ 10ರಂದು ಭಾರೀ ಸಂರಕ್ಷಣಾ ಏರ್ಪಾಡಿನೊಂದಿಗೆ ನಡೆದ ಅಂತ್ಯ ಸಂಸ್ಕಾರ ಕಾರ್ಯಕ್ರಮಗಳಲ್ಲಿ ಅಮೇರಿಕದ ಮೂವರು ಮಾಜಿ ಅಧ್ಯಕ್ಷರೂ ಸೇರಿದಂತೆ ಪಶ್ಚಿಮದ ಪ್ರಮುಖ ನಾಯಕರೆಲ್ಲಾ ಭಾಗವಹಿಸಿದ್ದರೂ ಅರಬ್ ದೇಶಗಳ ಪೈಕಿ ಮೂರು ದೇಶಗಳನ್ನು ಬಿಟ್ಟು ಮತ್ತೆಲ್ಲರ ಗೈರುಹಾಜರಿ ಗಮನಾರ್ಹವಾಗಿತ್ತು. ಹಾಜರಿದ್ದ ಮೂರು ದೇಶಗಳೆಂದರೆ ಸುಡಾನ್, ಓಮನ್ ಹಾಗೂ ಸೋಮಾಲಿಯಾ. ಇವು ಮೂರು ಸಾಮ್ರಾಜ್ಯಶಾಹಿಗಳ ನಿಕಟ ಸಹಯೋಗಿಗಳು ಕುಖ್ಯಾತವಾದ ದೇಶಗಳು. ಈಜಿಪ್ಟಿನ ಜನತೆಯೂ ಸಾದತ್‌ರ ಅಂತ್ಯದಿಂದ ಅಷ್ಟೊಂದು ದುಃಖಿತರಾದಂತೆ ಕಾಣುತ್ತಿರಲಿಲ್ಲವಂತೆ. "ಇದು ಈಜಿಪ್ಟಿನ 43ಮಿಲಿಯ ಜನತೆ ಒತ್ತಟ್ಟಿಗಿರಲಿ, ಸೈನ್ಯದಲ್ಲಿನ ಹಾಗೂ ಸರಕಾರದಲ್ಲಿನ ತನ್ನ ಸಹಯೋಗಿಗಳಲ್ಲಿ ಕೂಡಾ ಸಾದತ್‌ರ ಬಗೆಗಿದ್ದ ಗೌರವವನ್ನು ಜನಪ್ರಿಯತೆಯನ್ನು ಕುರಿತು ಸಂಶಯ ಮೂಡಿಸುತ್ತಿದೆ" ಎಂದು ವಾಷಿಂಗ್‌ಟನ್ ಪೋಸ್ಟ್ ಪತ್ರಿಕೆ ಕೈರೋದಿಂದ ವರದಿ ಮಾಡಿದೆ.

ಸಾದತ್‌ರ ಕೊಲೆ ಬಗ್ಗೆ ಬಂದ ಪ್ರತಿಕ್ರಿಯೆಗಳಲ್ಲೂ ಪರಸ್ಪರ ವೈರುಧ್ಯ ಕಾಣುತ್ತಿತ್ತು. ಸತ್ತವನ ಬಗ್ಗೆ ಕೆಡುಕು ನುಡಿಯುವುದು ಇಸ್ಲಾಮೀ ಸಂಪ್ರದಾಯಕ್ಕೆ ವಿರುದ್ಧವಾಗಿದ್ದರೂ ಅರಬ್ ಜಗತ್ತಿನಲ್ಲಿ ಬಹಳಷ್ಟು ಸಂತೋಷ, ಆನಂದ ಕಂಡು ಬಂತು. ಸೌದಿ ಅರೇಬಿಯಾ, ಜೋರ್ಡಾನ್. ಕುವೈತ್, ಯು.ಎ.ಇ. ಇತ್ಯಾದಿ ಪಾಶ್ಚಿಮಾತ್ಯ ಪರ ಅರಬ್ ದೇಶಗಳೂ ತಕ್ಷಣ ಏನೂ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ. ತದ್ವಿರುದ್ಧವಾಗಿ ಪಾಶ್ಚಿಮಾತ್ಯ ದೇಶಗಳು, ವಿಶೇಷವಾಗಿ ಅಮೇರಿಕಾ ಸಾದತ್‌ರ ಕೊಲೆಯಿಂದ ಗಡಿಬಿಡಿಗೊಂಡಂತೆ ಕಾಣುತ್ತಿತ್ತು. ವಾಷಿಂಗ್ಟನ್‌ನ ಅಧಿಕಾರ ವಲಯಗಳಲ್ಲಂತೂ ದುಃಖದ ವಾತಾವರಣ ವ್ಯಾಪಿಸಿದಂತಿತ್ತು.

ಸಾದತ್‌ರು ತಮ್ಮ ಅಧಿಕಾರಾವಧಿಯಲ್ಲಿ ಅನುಸರಿಸಿದ ಧೋರಣೆಗಳೇ ಈ ಪರಸ್ಪರ ವಿರುದ್ಧ ಪ್ರತಿಕ್ರಿಯೆಗಳಿಗೆ ಕಾರಣ. ಸಾದತ್‌ರು ಬಹುಸಂಖ್ಯಾತ ಅರಬ್ಬರ ಮಟ್ಟಿಗೆ ವಿಶ್ವಾಸದ್ರೋಹಿಯಾಗಿ ಕಂಡುಬಂದಿದ್ದರೆ ಅಮೇರಿಕನ್ ಹಾಗೂ ಇತರ ಸಾಮ್ರಾಜ್ಯಶಾಹಿಗಳಿಗೆ "ಈಜಿಪ್ಟನ್ನು ಸೋವಿಯೆತ್ ಯೂನಿಯನ್‌ನ ಪ್ರಭಾವ ವಲಯದಿಂದ ಈಚೆಗೆಳೆದ" ಗೆಳೆಯರಾಗಿ ಕಾಣುತ್ತಿದರು. ಬಹುಶಃ ಕಡು ದ್ವೇಷಕ್ಕೊಳಗಾಗಿದ್ದ ಇರಾನಿನ ಶಹಾನ ನಂತರ ಅಮೇರಿಕಾದ ಧೋರಣೆ ಒಬ್ಬ ವ್ಯಕ್ತಿಮಾತ್ರ ಮೇಲೆ ಇಷ್ಟೊಂದು ಆಳವಾಗಿ ಅವಲಂಭಿಸಿದ್ದು ಇದಕ್ಕೆ ಕಾರಣವಾಗಿರಬಹುದು.

ನಾಸೆರ್ ಧೋರಣೆಗಳಿಗೆ ವಿರುದ್ಧ

ಸಾದತ್ ಅಧಿಕಾರಕ್ಕೆ ಬಂದದ್ದು ಗಮಾಲ್ ಅಬ್ದುಲ್ ನಾಸೆರ್ 1970ರಲ್ಲಿ ಅಸುನೀಗಿದ ಮೇಲೆ. ನಾಸೆರ್ ಅಲಿಪ್ತ ಚಳುವಳಿಯ ಸ್ಥಾಪಕ ಸದಸ್ಯರಾಗಿದ್ದರು. ಸುಮಾರಾಗಿ ಸಾಮ್ರಾಜ್ಯಶಾಹೀ ವಿರೋಧಿ ಧೋರಣೆ ವಹಿಸಿ ಅರಬ್ ಜಗತ್ತಿನ ನಾಯಕರಾಗಿದ್ದರು. ಆಂತರಿಕವಾಗಿ ರೈತರನ್ನು ಶತಮಾನಗಳ ಗುಲಾಮಗಿರಿಯಿಂದ ಬಿಡಿಸಿದ ಕೆಲವು ಸುಧಾರಣೆಗಳನ್ನು ಜ್ಯಾರಿಗೆ ತಂದರು; ಸಾಮ್ರಾಜ್ಯಶಾಹಿ ಹಿತಾಸಕ್ತಿಗಳಿಗೆ ಧಕ್ಕೆಯುಂಟುಮಾಡುವ ಕೆಲವು ರಾಷ್ಟ್ರೀಕರಣ ಕ್ರಮ ಕೈಗೊಂಡರು. ಇದಕ್ಕನುಗುಣವಾದ ಆಡಳಿತ ವ್ಯವಸ್ಥೆ ಜ್ಯಾರಿಗೆ ತಂದರು: (ಈ ವ್ಯವಸ್ಥೆಯಲ್ಲಿಯೂ ಕಮ್ಯುನಿಸ್ಟ್ ಪಕ್ಷ ಕಾನೂನುಬದ್ಧವಾಗಿ ಕಾರ್ಯನಿರ್ವಹಿಸಲು, ಪ್ರಜಾಪ್ರಭುತ್ವ ಚಳುವಳಿ ನಿರ್ಬಂಧರಹಿತವಾಗಿರಲು ಅವಕಾಶವಿರಲಿಲ್ಲ) ಸೋವಿಯತ್ ಯೂನಿಯನ್ ಹಾಗೂ ಇತರ ಸಮಾಜವಾದೀ ದೇಶಗಳೊಂದಿಗೆ ಅವರು ಉತ್ತಮ ಸಂಬಂಧವಿಟ್ಟುಕೊಂಡಿದ್ದರು.

ಸಾದತ್ ಅಧಿಕಾರಕ್ಕೆ ಬಂದಕೂಡಲೇ ಇವೆಲ್ಲಾ ಬದಲಾದವು. ಸೋವಿಯತ್ ಯೂನಿಯನ್ ಬಗ್ಗೆ ಸಹಾನುಭೂತಿ ಹೊಂದಿದ್ದ ಎಲ್ಲಾ ಸರಕಾರೀ ಹಾಗೂ ಇತರ ಅಧಿಕಾರಿಗಳನ್ನು ವಜಾಮಾಡಲಾಯಿತು. ನಾಸೆರ್ ಕಾಲದಲ್ಲಿ ಸ್ವಲ್ಪಮಟ್ಟಿಗಾದರೂ ಪ್ರಜಾಪ್ರಭುತ್ವ ಹಕ್ಕುಗಳಿಗೆ ಅವಕಾಶವಿದ್ದ ವ್ಯವಸ್ಥೆಯನ್ನು ಸಂಪೂರ್ಣ ಬದಲಾಯಿಸಲಾಯಿತು. ಕಮ್ಯುನಿಸ್ಟರು ಹಾಗೂ ಪ್ರಜಾಪ್ರಭುತ್ವವಾದಿಗಳಿಗೆ ಉಪಟಳ ವಿಪರೀತಗೊಂಡಿತು. ಆರ್ಥಿಕ ಪ್ರಗತಿಯಿಲ್ಲದೆ ಜನ ಬಡತನದ ಬೇಗೆಯಲ್ಲಿ ಬೇಯಲಾರಂಭಿಸಿದರು ಬೇಸತ್ತ ಜನತೆ ಅಲ್ಲಲ್ಲಿ ಗಲಭೆಗಳನ್ನೂ ಎಬ್ಬಿಸಿದರು. ಈ ಮಧ್ಯೆ 1973ರಲ್ಲಿ ಈಜಿಪ್ಟ್ ಸೈನಿಕರು ಇಸ್ರೇಲೀ ಆಕ್ರಮಣಗಾರರನ್ನು ಸುಯೇಜ್ ಕಾಲುವೆಯಾಚೆ ದಬ್ಬಿದ ಸಮಯ ಸಾದತ್‌ರ ಜನಪ್ರಿಯ ಅವಧಿಯಾಗಿತ್ತು. ಆದರೆ ಇದೂ ಬಹಳ ದಿನ ಉಳಿಯಲಿಲ್ಲ.

ಕ್ಯಾಂಪ್ ಡೇವಿಡ್ ವಿಶ್ವಾಸ ದ್ರೋಹ

ಸಾದತ್‌ರನ್ನು ವಿಶ್ವಾಸದ್ರೋಹಿಯೆಂದು ಅರಬ್ಬರು ಪರಿಗಣಿಸಲು ಕಾರಣ ಅವರು ಅರಬ್ ಹಿತಾಸಕ್ತಿಯನ್ನು ಕಡೆಗಣಿಸಿ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಹಾಗೂ ಇಸ್ರೇಲೀ ಆಕ್ರಮಣಕಾರರೊಂದಿಗೆ ಒಡಂಬಡಿಕೆ ಮಾಡಿಕೊಂಡದ್ದು. 1977ರಲ್ಲಿ ಸಾದತ್ ತನ್ನ ಅರಬ್ ಸಹಯೋಗಿಗಳನ್ನೆಲ್ಲಾ ಬಿಟ್ಟು ತಾನು ಮಾತ್ರ ಏಕಪಕ್ಷೀಯವಾಗಿ ಜೆರುಸಲೇಮ್‌ಗೆ ಭೇಟಿಕೊಟ್ಟ ಫಲವಾಗಿ ಮರುವರ್ಷ "ಕ್ಯಾಂಪ್ ಡೇವಿಡ್ ಒಪ್ಪಂದ" ಎಂದು ಕರೆಯಲಾದ ಒಪ್ಪಂದ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಹಾಗೂ ಆಕ್ರಮಣಗಾರರ ಇಚ್ಛೆಗನುಸಾರವಾಗಿ ಸಹಿಹಾಕಿದರು. ಈ ಮೂಲಕ ಸಾಮ್ರಾಜ್ಯಶಾಹಿಗಳು ಹಾಗೂ ಆಕ್ರಮಣಗಾರರು ಕೊನೆಗೂ ಅರಬ್ ಒಗ್ಗಟ್ಟನ್ನು ಮುರಿಯಲು ಸಾದತ್ ಒಂದು ಸಾಧನವಾದರು.

ತಾನು ಮಾಡಿಕೊಂಡ ಒಪ್ಪಂದ ತನ್ನ ಶಾಂತಿಪ್ರಯತ್ನಗಳಿಗೆ ಸಿಕ್ಕ ಗೆಲುವು ಎಂದು ಅರಬ್ ಗೆಳೆಯರನ್ನು ನಂಬಿಸಲು ಸಾದತ್ ಶತಪ್ರಯತ್ನಪಟ್ಟರೂ ಉಪಯೋಗವಾಗಲಿಲ್ಲ. ಇಸ್ರೇಲಿಗಳು ಆಕ್ರಮಿತ ಪ್ರದೇಶದಿಂದ ಹಿಂದೆಗೆಯಲು, ಪ್ಯಾಲೆಸ್ಟೇನಿಯನ್ನರ ಸ್ವಯಮಾಡಳಿತ ಹಕ್ಕನ್ನು ಮಾನ್ಯ ಮಾಡಲು ಒಪ್ಪಿದ್ದಾರೆಂದೂ ಸಾದತ್ ಹೇಳುತ್ತಿದ್ದರು. ಆದರೆ ವಾಸ್ತವ ಸಂಗತಿಯೇ ಬೇರೆ.

ಪಶ್ಚಿಮ ಏಷ್ಯಾ ಸಮಸ್ಯೆಗೆ ಪರಿಹಾರ ದೊರೆಯಬೇಕಾದರೆ ಇರುವ ಏಕೈಕ ಮಾರ್ಗವೆಂದರೆ ಇಸ್ರೇಲಿಗಳು ತಾವು ಆಕ್ರಮಿಸಿಕೊಂಡ ಅರಬ್ ಪ್ರದೇಶಗಳಿಂದ ಸಂಪೂರ್ಣವಾಗಿ ಕಾಲ್ತೆಗೆದು, ಪ್ಯಾಲೆಸ್ಟೇನಿಯಾದ ಜನತೆ ತಮ್ಮದೇ ಆದ ಪ್ರಭುತ್ವ ಹೊಂದುವ ಹಕ್ಕನ್ನು ಮಾನ್ಯಮಾಡಿ, ಪ್ಯಾಲೆಸ್ಟೇನಿಯಾ ವಿಮೋಚನಾ ಸಂಘಟನೆಯನ್ನು ಪ್ಯಾಲೆಸ್ಟೇನಿಯನ್ ಜನತೆಯ ಏಕಮಾತ್ರ ಪ್ರತಿಭೆಯೆಂದು ಒಪ್ಪಿಕೊಳ್ಳುವುದು (ಸಂಯುಕ್ತ ರಾಷ್ಟ್ರ ಸಂಘಟನೆ ಒಪ್ಪಿಕೊಂಡಂತೆ). ಇದನ್ನು ಸಾಧಿಸದ ಯಾವುದೇ ಒಪ್ಪಂದ ಅರಬ್ಬರಿಗೆ ಗೈಯುವ ವಿಶ್ವಾಸದ್ರೋಹ. ಕ್ಯಾಂಪ್ ಡೇವಿಡ್ ಒಪ್ಪಂದ ಮಾಡಿದ್ದು ಇದನ್ನೇ. ಅದು ಇಸ್ರೇಲಿನ ಆಕ್ರಮಣವನ್ನು ಖಾಯಂಗೊಳಿಸಿತು. ಸಾದತ್ ಈ ಮೂಲಕ ಅಮೇರಿಕನ್-ಇಸ್ರೇಲೀ ಪಾಳಿಯ ಸೇರಿಕೊಂಡು ತನ್ನ ಮಿತ್ರರಿಗೆ ಎರಡು ಬಗೆದರು.

ಸಾದತ್‌ರ ಅಮೇರಿಕನ್ ಸಾಮ್ರಾಜ್ಯಶಾಹಿಗಳೊಂದಿನ ಸಹಕಾರ ಇಲ್ಲಿಗೇ ನಿಲ್ಲಲಿಲ್ಲ. ಅಫಘಾನಿಸ್ತಾನದ ಪ್ರತಿಕ್ರಿಯಾವಾದಿಗಳಿಗೆ ಬೆಂಬಲವಾದ ಅಮೇರಿಕನ್ ಸಾಮ್ರಾಜ್ಯಶಾಹಿಗಳಿಗೆ ಸಹಾಯ ಮಾಡುವ ದುಷ್ಟ ಪ್ರಯತ್ನ ನಡೆಸಲೂ ಅವರು ಹೇಸಲಿಲ್ಲ. ಸಾಮ್ರಾಜ್ಯಶಾಹಿಗಳೊಂದಿಗೆ ಸಾದತ್‌ರ ಸಹಯೋಗ ಎಷ್ಟೊಂದು ಆಳವಾಗಿತ್ತೆಂದರೆ ಅಮೇರಿಕಾದಿಂದ ಯುದ್ಧ ವಿಮಾನಗಳನ್ನು ಖರೀದಿಸಲು ಯೋಚಿಸುತ್ತಿರುವ ಸೌದಿ ಅರೇಬಿಯಾದಂತಹ ದೇಶಗಳೂ ಸಾದತ್‌ರಿಗೆ ಈ ವಿಷಯದಲ್ಲಿ ಬೆಂಬಲ ಸೂಚಿಸಲು ಹಿಂದೆ ಮುಂದೆ ನೋಡುತ್ತ ಅಲಿಪ್ತ ಚಳುವಳಿ ಈ ಒಪ್ಪಂದವನ್ನು ನೇರವಾಗಿ ಖಂಡಿಸಿದೆ.

ಹೊರಜಗತ್ತಿನಲ್ಲಿ ಈ ರೀತಿ ಎಲ್ಲರಿಂದಲೂ ದೂರಗೊಂಡ ಸಾದತ್ ಆಡಳಿತ ಆತಂಕವಾಗಿಯೂ ಜನರಿಂದ ದೂರವಾಗಲಾರಂಭಿಸಿತ್ತು. ಸಾದತ್ ದೇಶದ ಮೇಲೆ ಹೇರಿದ ದಮನಕಾರೀ ಆಡಳಿತ ಹಾಗೂ ವಿದೇಶ ನೀತಿಯಿಂದಾಗಿ ಅರಬ್ ಜಗತ್ತಿನಲ್ಲಿ ಒಬ್ಬಂಟಿಗರಾಗಿ ನಿಲ್ಲಬೇಕಾಗಿ ಬಂದ ಪರಿಸ್ಥಿತಿ ಬಗ್ಗೆ ಈಜಿಪ್ಟ್ ಜನತೆಯಲ್ಲಿ ಅತೃಪ್ತಿ ಬೆಳೆಯಲಾರಂಭಿಸಿತು. ಸಾದತ್‌ಗೆ ಈಗ ನಿಕಟರಾಗಿ ಉಳಿದಿದ್ದವರು ಸಾಮ್ರಾಜ್ಯಶಾಹಿದಳು ಮಾತ್ರ. ಹೀಗೆ ಅರಬ್ ಪ್ರದೇಶದಲ್ಲಿ ಅಮೇರಿಕಾದ ಏಜೆಂಟರಾಗಿ ಕಾರ್ಯನಿರ್ವಹಿಸಲಾರಂಭಿಸಿದ ಸಾದತ್‌ರ ರಾಜಕೀಯ ಪತನ ಶುರುವಾಗಿ ಬಿಟ್ಟಿತ್ತು. ಈ ಪತನ ಕೇವಲ ರಾಜಕೀಯವಾಗಿ ಮಾತ್ರವಲ್ಲ ಎಂದು ಹಂತಕನ ಗುಂಡುಗಳೂ ಈಗ ತೋರಿಸಿಕೊಟ್ಟಿದೆ.

ಮುಂದಿನ ಧೋರಣೆಯೇನು?

ಸಾದತ್‌ರ ಸ್ಥಾನಕ್ಕೆ ಬರುವ ಹೊಸ ಆಡಳಿತಗಾರರೂ ಕ್ಯಾಂಪ್ ಡೇವಿಡ್ ಧೋರಣೆಯೂ ಸೇರಿದಂತೆ ಸಾದತ್‌ರ ಧೋರಣೆಗಳನ್ನು ಮುಂದುವರಿಸಲಾಗುವುದೆಂದು ಹೇಳುತ್ತಿದ್ದಾರೆ. ಈ ಒಪ್ಪಂದ ಮುರಿದು ಬೀಳದಂತೆ ಅಮೇರಿಕನ್ ಸಾಮ್ರಾಜ್ಯಶಾಹಿಗಳೂ ಕೈಲಾದನ್ನು ಮಾಡುತ್ತಿದ್ದಾರೆ. ಈಜಿಪ್ಟ್ ಮುಂದೆಯೂ ಅಮೇರಿಕಾದ ಏಜೆಂಟ್ ಆಗಿಯೇ ಉಳಿಯುವಂತೆ ಪ್ರಯತ್ನಿಸುತ್ತಿದ್ದಾರೆ. ಆದರೆ ಕ್ಯಾಂಪ್ ಡೇವಿಡ್ ಒಪ್ಪಂದವನ್ನು ಪುನರುಜ್ಜೀವನಗೊಳಿಸುವವರೆಲ್ಲಾ ನೆನಪಿಡಬೇಕಾದ ಸಂಗತಿಯೆಂದರೆ ಈ ಒಪ್ಪಂದ ಗಾಳಿಯಲ್ಲಿ ಕಟ್ಟಿದ ಮಹಲು ಎಂಬುದು. ಅರಬ್ ಹಿತಾಸಕ್ತಿಗಳಿಗೆ ತೀರಾ ವಿರುದ್ಧವಾದ ಈ ಒಪ್ಪಂದ ಸಾದತ್ ಸಾಯುವ ಮೊದಲೇ ಸತ್ತಿದೆ. ಸಾಮ್ರಾಜ್ಯಶಾಹಿಗಳನ್ನು ಅವಲಂಭಿಸಿದ ಅವರ ಬೆಂಬಲ ಪಡೆದ ಯಾವುದೇ ಧೋರಣೆ ಸೋಲುವುದು ಶತಸ್ಸಿದ್ಧ. ಪರಿಣಾಮವೆಂದರೆ ಸಾದತ್ ಕಂಡಂತಹ ವೈಯಕ್ತಿಕ ದುರಂತ. ಈಜಿಪ್ಟ್ ನಾಯಕರು ಈ ಬಗ್ಗೆ ಎಚ್ಚರದಿಂದಿರಬೇಕು.

○

-ಎನ್ಕೆ

ಕರ್ನಾಟಕ ರಾಜ್ಯದಲ್ಲಿ

ಕೆ. ಟಿ. ರಾಠೋಡರವರಿಗೆ ಕೇಂದ್ರದ ಕಿವಿ ಮಾತು

ಒಂದೆಡೆ ತೀಕ್ಷ್ಣವಾಗುತ್ತಿರುವ ಆರ್ಥಿಕ ಬಿಕ್ಕಟ್ಟು, ಮತ್ತೊಂದೆಡೆ ಅಧಿಕಾರಕ್ಕಾಗಿ ಕಚ್ಚಾಟ, ಬಹಿರಂಗ ಆಪಾದನೆಗಳು, ಮುಷ್ಟಿಯುದ್ಧ. ಇಂದಿರಾಗಾಂಧಿ ತನ್ನ ಪಕ್ಷ ಮತ್ತು ಆಡಳಿತೆಯನ್ನು ಏಕವ್ಯಕ್ತಿ ಸರ್ವಾಧಿಕಾರದತ್ತ ಒಯ್ಯುತ್ತಿರುವಾಗ ಬಂಡವಾಳಶಾಹಿ ಪಕ್ಷದಲ್ಲಿ ಗುಂಪುಗಾರಿಕೆ ಅಧಿಕಾರಕ್ಕೆ ಪೈಪೋಟಿ ನಡೆಯುವುದು ಸ್ವಾಭಾವಿಕ. ಆಳುವ ಇಂದಿರಾ ಕಾಂಗ್ರೆಸ್ಸಿನ ಒಳಜಗಳ ಇನ್ನಷ್ಟು ತೀವ್ರಗೊಳ್ಳುತ್ತದೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಹೇಳುತ್ತಲೇ ಬಂದಿದೆ. ಆ ಕಾರಣದಿಂದಲೇ ಇಂದಿರಾ ಕಾಂಗ್ರೆಸ್ಸಿಗೆ ಎದುರಾಳಿಯಾಗಿ ಎಡ ಮತ್ತು ಪ್ರಜಾಪ್ರಭುತ್ವ ರಂಗವನ್ನು ಬಲಿಷ್ಟಗೊಳಿಸುವ ಅವಶ್ಯಕತೆಯನ್ನೂ ಸಿ. ಪಿ. ಎಂ. ಒತ್ತಿ ಹೇಳಿದೆ.

ಸರಕಾರಿ ಅಧಿಕಾರದಲ್ಲಿದ್ದವರು ಪಕ್ಷದ ಅಧಿಕಾರ ಸ್ಥಾನದಲ್ಲಿರಬಾರದೆಂದು ಕಾಂಗ್ರೆಸ್ ಘಟನೆ ಸಾರುತ್ತದೆ. ಆದರೆ ಇತರ ರಾಜ್ಯಗಳಂತೆಯೇ ಕರ್ನಾಟಕದಲ್ಲೂ ಮಂತ್ರಿಗಳು ಎಂ. ಎಲ್.ಎ., ಎಂ.ಪಿ.ಗಳೆಲ್ಲ ಪಕ್ಷದ ಅಧಿಕಾರ ಸ್ಥಾನದಲ್ಲಿದ್ದಾರೆ. ಕೆ. ಟಿ. ರಾಠೋಡರವರು ರಾಜ್ಯ ಕಾಂಗ್ರೆಸ್ ಅಧ್ಯಕ್ಷರಾದ ನಂತರ ಹ್ಯಾಕಮಾಂಡ ಆದೇಶದಂತೆ ಎರಡು ಸ್ಥಾನ ಅಲಂಕರಿಸಿದವರಿಗೆಲ್ಲ ಒಂದು ಸ್ಥಾನ ಬಿಟ್ಟುಕೊಡುವಂತೆ ಕೇಳಿಕೊಂಡರು. ಧರ್ಮಸಿಂಗ ಅವರು ಮಾತ್ರ ಗುಲ್ಬರ್ಗದ ಜಿಲ್ಲಾ ಕಮಿಟಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಇತ್ತರು. ಗುಂಡೂರಾಯರನ್ನೊಳಗೊಂಡು ಯಾರೂ ತಮ್ಮ ಪಕ್ಷದ ಅಧಿಕಾರ ಸ್ಥಾನಕ್ಕೆ ರಾಜಿಕೊಡಲಿಲ್ಲ. ರಾಠೋಡರವರು ಅವರಿಗೆಲ್ಲ ನೋಟೀಸು ಕೊಟ್ಟು ರಾಜೀ ಕೊಡುವಂತೆ ಒತ್ತಾಯಿಸಿದರು. ಗುಂಡೂರಾವ್-ರಾಠೋಡರ ನಡುವೆ ವಿರಸ ಉಂಟಾಯಿತು. ಬಂಗಾರಪ್ಪ ಗುಂಪಿನವರು ಗುಂಡೂರಾವ್ ಸರಕಾರದ ವಿರುದ್ಧ ಕೇಂದ್ರಕ್ಕೆ ಆರೋಪಗಳ ಮನವಿ ಸಲ್ಲಿಸಿದರು. ರಾಠೋಡರವರು ಬಂಡುಗಾರರಿಗೂ ನೋಟೀಸ್ ಕೊಟ್ಟರು. ಖಾನ್-ಶರೀಫರಂಥವರಿಗೂ ಖಾರವಾದ ಪತ್ರಗಳು ಹೋದವು. ಪಾರ್ಟಿ ಸಂಘಟನೆಯಲ್ಲಿ ಶಿಸ್ತು, ಐಕ್ಯತೆ ಸಾಧಿಸಬೇಕೆಂದು ರಾಠೋಡರವರು ಕೈಕೊಂಡ ಕ್ರಮಗಳಿಂದಾಗಿ ಪಕ್ಷದಲ್ಲೇ ಬಂಡಾಯ ಹೆಚ್ಚಾಯಿತು, ಗೊಂದಲ ಉಂಟಾಯಿತು.

ತನ್ನ ಪಕ್ಷಕ್ಕೆ ಶಿಸ್ತು, ಒಗ್ಗಟ್ಟು ಪ್ರಾಧಾನ್ಯವಲ್ಲ, ಇಂದಿರಾ ಆಶೀರ್ವಾದವೇ ಪ್ರಾಧಾನ್ಯವೆಂಬುದನ್ನು ರಾಠೋಡರವರಿನ್ನೂ ಕಂಡುಹಿಡಿದಂತೆ ಕಂಡುಬರುವುದಿಲ್ಲ. ಕೋಟ್ಯಾವಧಿ ರೂಪಾಯಿ ಇಂದಿರಾ ಟ್ರಸ್ಟಿನ ಹೆಸರಲ್ಲಿ ಎತ್ತಿ ಹಾಕಿದ ಅಂತುಳೆಯವರಾಗಲೀ, ಚುನಾವಣೆಯಲ್ಲಿ ಬಾಲ ಸುಟ್ಟುಕೊಂಡ ಅಂಜಯ್ಯನವರಾಗಲೀ, ಪ್ರತಿ ದಿವಸ ಮಹಿಳೆಯರ, ಹರಿಜನರ ಅತ್ಯಾಚಾರಕ್ಕೆ ಕಾರಣಭೂತರಾದ ಬಿಹಾರಿನ ಮುಖ್ಯಮಂತ್ರಿಯುವರಾಗಲೀ, ನಮ್ಮ ರಾಜ್ಯದ ಗುಂಡೆದೆಯ ಗುಂಡೂರಾಯರಾಗಲೀ ಜನರಿಗೆ ಬೇಡಾದವರಾದರೂ ಇಂದಿರಮ್ಮನಿಗೆ ಪ್ರೇಮದ ಪುತ್ರರು. ಪಕ್ಷದ ಜಿಲ್ಲೆಯ ಅಧ್ಯಕ್ಷ ಸ್ಥಾನದಿಂದ ಅವರನ್ನು ಕಿತ್ತೊಗೆಯುವುದಷ್ಟೇ ಅಲ್ಲ ಅವರ ರೋಮ ಕೂಡ ಅಲುಗಾಡಿಸುವ ನೈತಿಕ ಶಕ್ತಿ ಅಮ್ಮಾವ್ರಿಗಿಲ್ಲ. ಅಮ್ಮಾವ್ರ ಒಳಗುಟ್ಟೆಲ್ಲ ಅಂತುಳೆ, ಅಂಜಯ್ಯ, ಗುಂಡೂರಾಯರ ಕಿಸೆಯಲ್ಲಿ ಭದ್ರವಾಗಿರುವಾಗ ಇವರನ್ನೆಲ್ಲ ಅಸಮಾಧಾನಗೊಳಿಸುವ ಪ್ರಶ್ನೆ ಎಲ್ಲಿ. ಎಂದೇ ಹ್ಯಾಕಮಾಂಡ ರಾಠೋಡರವರಿಗೆ ಕಿವಿಮಾತು ಹೇಳಿದೆ, ಬಂಡುಕೋರ ಕಾಂಗ್ರೆಸ್ಸಿನವರ ಜೊತೆಯಲ್ಲಿ ಜಾಗ್ರತೆಯಿಂದ ವರ್ತಿಸಿರಿ. ಏಕದಂ ನೋಟೀಸು ಕೊಡುವುದಾಗಲೀ, ಶಿಸ್ತು ಭಂಗ ಕ್ರಮ ತೆಗೆದುಕೊಳ್ಳುವುದಾಗಲೀ ಬೇಡ. ಕಾಂಗ್ರೆಸ್ ಪಕ್ಷದ ಘಟನೆ ಕಾವೇರಿ ಪವಿತ್ರ ತೀರ್ಥದಲ್ಲಿ ಹರಿದು ಹೋಯಿತು. ಗುಂಡೂರಾಯರು ಕೊಡಗು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿಯೇ ಉಳಿದರು. ತಮಗೆ ಬೇಡಾದ ಜಿಲ್ಲಾ ಉಪಾಧ್ಯಕ್ಷರನ್ನೆಲ್ಲ ಸಸ್ಪೆಂಡ್ ಮಾಡಿದರು. ಅತ್ತ ಕಾಗೋಡ ತಿಮ್ಮಪ್ಪನವರು ಹೇಳಿಕೆಯೊಂದರ ಮೂಲಕ ಮುಖ್ಯಮಂತ್ರಿಯನ್ನೂ, ರಾಜ್ಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷರನ್ನೂ ಅಮ್ಮಾವ್ರಿಗೆ ಬಿಟ್ಟುಕೊಡೋಣವೆಂದು ಸಾರಿದರು.

ಪಾಪ! ರಾಠೋಡರವರ ಗತಿ! ಒಂದೇ ಕಲ್ಲಿನಿಂದ ಎರಡು ಹಕ್ಕಿಗಳನ್ನು ಹೊಡೆದು ಹಾಕಲು ಹೊರಟ- ಅಂದರೆ ಗುಂಡೂರಾಯರ ಗುಂಪನ್ನೂ, ಬಂಗಾರಪ್ಪ ಗುಂಪನ್ನೂ- ಹಿಂದೆ ಸರಿಸಿ, ಮುಂಬರುವ ಚುನಾವಣೆ ಕಾಲದಲ್ಲಿ ಇವರೆಲ್ಲ ಜಿ ಹುಜೂರ ಎಂದು ತಮ್ಮ ಬಲೆಗೆ ಬೀಳುತ್ತಾರೆಂಬ ರಾಠೋಡರವರ ಕನಸು ನನಸಾಗಲಿಲ್ಲ. ರಾಠೋಡರವರೇ ನಿಮ್ಮ ಶಿಸ್ತು ನಮ್ಮಲ್ಲಿ ನಡೆಯೊಲ್ಲ, ಅಮ್ಮಾವ್ರ ಆಶೀರ್ವಾದ ಮುಂಗಿದೆ, ನೀವೂ ಅದನ್ನು ಪಡೆಯಿರಿ, ಪ್ರೀತಿಪಾತ್ರರಾಗಿರಿ. ಆಗ ಮಾತ್ರ ನಿಮ್ಮ ಸ್ಥಾನ ಭದ್ರ, ನೀವೂ ಭದ್ರ, ಇಲ್ಲವಾದರೆ ಈ ಬಂಡೇಗಲ್ಲು ಗುಂಡೂರಾಯರಿಗೆ ಬಡಿದು ನಾಶವಾದೀರಿ! ಜೋಕೆ. ಇದೇ ಇಂದಿರಾ ಕಾಂಗ್ರೆಸ್ಸಿನ ಶಿಸ್ತು ನೋಡಿದಿರಾ.

ಗೋಕಾಕ್ ಸಮಿತಿ ವರದಿ; ಕನ್ನಡ-ಸಂಸ್ಕೃತ ಯುದ್ಧ

ಆಯಾ ಜನಾಂಗದ, ರಾಜ್ಯದ ಜನತೆಯ ಭಾಷೆ, ಸಂಸ್ಕೃತಿ, ಶಿಕ್ಷಣ ವಿಕಾಸಗೊಳ್ಳಬೇಕಾದರೆ, ಅಭಿವೃದ್ಧಿಯಾಗಬೇಕಾದರೆ, ಆಯಾ ರಾಜ್ಯದ ಜನಾಂಗದ ಭಾಷೆಯೇ ದಿನನಿತ್ಯದ ವ್ಯವಹಾರದ ಭಾಷೆಯಾಗಬೇಕೆಂದರ ಮಾರ್ಕ್ಸ್‌ವಾದ ಹೇಳುತ್ತದೆ. ಆ ಕಾರಣದಿಂದಲೇ ರಷ್ಯಾ ದೇಶದಲ್ಲಿ ಕ್ರಾಂತಿಯಾದ ಕೂಡಲೇ ಲೆನಿನ್ನರೂ, ಸ್ಟಾಲಿನ್ನರೂ, ಪ್ರಾದೇಶಿಕ, ಜನಾಂಗೀಯ, ರಾಜ್ಯಗಳ ಜನರ ಭಾಷೆಗಳ ಅಭಿವೃದ್ಧಿಗೆ ಮಹತ್ವಕೊಟ್ಟು, ಲಿಪಿಯಿಲ್ಲದ ಭಾಷೆಗಳಿಗೆ ಅದನ್ನೊದಗಿಸಿ, ಪ್ರತಿಯೊಂದು ವಿಷಯ ಆ ಜನರಿಗೆ ತಿಳಿಯುವಂತೆ ಮಾಡಲು ಶ್ರಮಪಟ್ಟರು. ಅದನ್ನು ಸಾಧಿಸಿದರು.

ಈ ಉದ್ದೇಶದಿಂದಲೇ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಆಗಿನ ಕಮ್ಯುನಿಸ್ಟ್ ಪಾರ್ಟಿ ಸಕ್ರಿಯವಾಗಿ ಪಾಲ್ಗೊಂಡಿತ್ತು. ಭೌಗೋಳಿಕ ಸುಲಗ್ನತೆಯ ಆಧಾರದ ಮೇಲೆ ಕನ್ನಡ ಬಾಳು, ಕನ್ನಡ ಭಾಷಿಕರು ಒಂದಾಗಿ ಕನ್ನಡ ಭಾಷೆ ವಿಕಾಸಗೊಂಡು ಎಲ್ಲ ಕನ್ನಡಿಗರಿಗೆ ತಿಳಿಯುವ ಕನ್ನಡ ಭಾಷೆಯಲ್ಲೇ ಆಡಳಿತೆ ನಡೆಯಬೇಕೆಂಬ ಮಹೋದ್ದೇಶ ದುಂಡಿಯುವ ಜನತೆಯ ಕಮ್ಯುನಿಸ್ಟ್ ಪಾರ್ಟಿಯಂದಾಗಿತ್ತು. ಆದರೆ ಕೇರಳ, ತಮಿಳನಾಡು, ಪ. ಬಂಗಾಳ, ಮಹಾರಾಷ್ಟ್ರ, ಆಂಧ್ರ ರಾಜ್ಯಗಳಲ್ಲಿ ತಂತಮ್ಮ ಭಾಷೆಯಲ್ಲೇ ಆಡಳಿತೆ ನಡೆಯುತ್ತಿದ್ದರೂ, ಕರ್ನಾಟಕ ರಾಜ್ಯದಲ್ಲಿ ಮಾತ್ರ ಇಂದಿಗೂ ಇಂಗ್ಲೀಷ್ ಪ್ರಾಧಾನ್ಯವಾಗಿದೆ. ಇಂಥ ಪರಿಸ್ಥಿತಿಯಲ್ಲಿ ಗುಂಡೂರಾವ್ ಅಧಿಕಾರಕ್ಕೆ ಬಂದ ನಂತರ ಪ್ರಥಮ ಸ್ಥಾನ ಸಂಸ್ಕೃತಕ್ಕೆ ಮೀಸಲಿಡುವ ದೃಷ್ಟಿಯಿಂದ, ಅಭ್ಯಾಸ ಮಾಡಿ, ವರದಿ ಒಪ್ಪಿಸಲು ಗೋಕಾಕ್ ಸಮಿತಿ ನೇಮಿಸಿತ್ತು. ಸರಕಾರದ ದುರುದ್ದೇಶವನ್ನು ತಿಳಿದುಕೊಂಡ ಜನತೆ, ಬಿಜಾಪುರ, ಧಾರವಾಡಗಳಲ್ಲಿ ಈ ಸಮಿತಿ ಸಂಚಾರ ಮಾಡಿದಾಗ ಪ್ರತಿಭಟನೆ ವ್ಯಕ್ತಮಾಡಿತು. ಈ ವರ್ಷ ಫೆಬ್ರವರಿ ತಿಂಗಳಲ್ಲಿ ಗೋಕಾಕ್ ಸಮಿತಿ ತನ್ನ ವರದಿಯನ್ನು ಸರಕಾರಕ್ಕೆ ಸಲ್ಲಿಸಿದೆ. ಗೋಕಾಕ್ ಸಮಿತಿಯ ವರದಿ ತನಗೆ ಅನುಕೂಲವಾಗಿಲ್ಲೆಂದು ತಿಳಿದು ಸರಕಾರ ಆ ವರದಿಯನ್ನು ಬಹಿರಂಗಪಡಿಸುತ್ತಿಲ್ಲ.

ಕನ್ನಡನಾಡಿನಲ್ಲಿ ಕನ್ನಡವೇ ಶಿಕ್ಷಣ ಮಾಧ್ಯಮವಾಗಬೇಕು, ರಾಜಭಾಷೆಯಾಗಬೇಕು. ಗೋಕಾಕ್ ವರದಿ ಶಿಕ್ಷಣದಲ್ಲಿ ಕನ್ನಡಕ್ಕೆ ಪ್ರಥಮ ಸ್ಥಾನ ಕೊಟ್ಟಿದೆ. ಎರಡನೇ ಮೂರನೇ ಸ್ಥಾನಗಳನ್ನು ಇಂಗ್ಲೀಷ್, ಹಿಂದಿ, ಸಂಸ್ಕೃತಗಳಿಗೆ ಮೀಸಲಾಗಿಟ್ಟಿದೆ. ಇದು ಯೋಗ್ಯ ಸೂಚನೆ. ಸಂಸ್ಕೃತ ಭಾಷೆ, ಸಾಹಿತ್ಯದ ಕುರಿತು ನಮಗೆ ತುಂಬ ಅಭಿಮಾನವಿದೆ. ಸಂಸ್ಕೃತದಲ್ಲಿ ಅತಿ ಉಚ್ಚಮಟ್ಟದ ಸಾಹಿತ್ಯವನ್ನು ನಾವು ಕಾಣುತ್ತೇವೆ. ಆದರೆ ಸಂಸ್ಕೃತ ಭಾಷೆ ಕೆಲವೇ ಜನರ ಮುಖ್ಯವಾಗಿ ಪಂಡಿತರ ಭಾಷೆಯಾಗಿಯೇ ಉಳಿದಿರುವುದರಿಂದ ಸರ್ವಸಾಮಾನ್ಯ ಜನರಿಗೆ ಅದರ ಉಪಯೋಗವಿಲ್ಲ. ಕನ್ನಡನಾಡಿನಲ್ಲಿ ಕನ್ನಡವೇ ಮಾತೃಭಾಷೆಯಲ್ಲದೆ ಸಂಸ್ಕೃತ ಆ ಸ್ಥಾನವನ್ನ ಲಂಕರಿಸಲಾರದು. ಸಂಸ್ಕೃತದ ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಪ್ರಭಾವಕ್ಕೊಳಗಾಗಿ ಗುಂಡೂರಾವ ಸರಕಾರ ಗೋಕಾಕ್ ವರದಿಯನ್ನು ಮುಚ್ಚಿಡುವುದು ಯೋಗ್ಯವಲ್ಲ.

ಇಂದಿರಾಗಾಂಧಿಯ ಕೇಂದ್ರ ಸರಕಾರ ಕೂಡ ತಮಗೊಲ್ಲದ ಶಿಫಾರಸುಗಳನ್ನೊಳಗೊಂಡ ವರದಿಗಳನ್ನೆಲ್ಲ ಮೂಲೆಗುಂಪು ಮಾಡುತ್ತಿರುವುದನ್ನು ನೋಡುತ್ತಿದ್ದೇವೆ. ಗುಂಡೆದೆಯ ಗುಂಡೂರಾಯರು ಅಮ್ಮನ ದಾರಿಯಲ್ಲೇ ಹೋಗಲು ಪ್ರಯತ್ನ ಮಾಡಿದರೆ ಕನ್ನಡಿಗರು ಬಂಡೇಳಬೇಕಾದೀತು. ಅಂಥ ಪರಿಸ್ಥಿತಿ ಬರಲಿಕ್ಕಿಲ್ಲೆಂದು ಆಶಿಸಲೇ?

ಅಮದು ಖಾದ್ಯತೈಲ ಧಾರಾಳ

ಹಬ್ಬ ಸಾಲಿನ ಬೇಡಿಕೆ ಪೂರೈಸುವ ಸಲುವಾಗಿ ಬೇಕಾಗಿರುವಷ್ಟು ಅಮದು ಖಾದ್ಯ ತೈಲವನ್ನು ಕೇಂದ್ರ ಸರಕಾರ ರಾಜ್ಯಗಳಿಗೆ ಪೂರೈಸಲು ಶಕ್ತವಾಗಿದೆ. ಎಣ್ಣೆಯ ಅಧಿಕ ಬೇಡಿಕೆಯನ್ನು ದೃಷ್ಟಿಯಲ್ಲಿರಿಸಿಕೊಂಡು ಸೆಪ್ಟೆಂಬರ್, ಅಕ್ಟೋಬರ್ ತಿಂಗಳಲ್ಲಿ 1,12,000 ಟನ್ ಖಾದ್ಯ ತೈಲವನ್ನು ರಾಜ್ಯಗಳಿಗೆ ಪಡಿತರ ವಿತರಣೆಗಾಗಿ ಪೂರೈಸಲಾಯಿತೆಂದು ಕೇಂದ್ರ ಸರಕಾರದ ವಕ್ತಾರರು ಹೇಳಿದ್ದಾರೆ. ಹೀಗೆ ಅಮದು ಎಣ್ಣೆ ಪೂರೈಸುವ ಮೂಲಕ ಬೆಲೆಗಳನ್ನು ಹತೋಟಿಯಲ್ಲಿಡಲಾಯಿತೆಂದೂ ಸಾರಿದ್ದಾರೆ.

ದಸರಾ–ದೀಪಾವಳಿ ಹಬ್ಬಗಳಿಗಾಗಿ ಜನರಿಗೆ ಹೆಚ್ಚುವರಿ ಎಣ್ಣೆಯ ಅವಶ್ಯಕತೆಯಿತ್ತು. ಕೇಂದ್ರಸರಕಾರ ಬಿಡುಗಡೆ ಮಾಡಿದ್ದ ಲಕ್ಷಾವಧಿ ಟನ್ ಖಾದ್ಯತೈಲ ಈ ಹಬ್ಬಗಳ ಸಮಯದಲ್ಲಿ ಜನರಿಗೆ ಸಿಗುವಂತಾಗಲಿಲ್ಲ. 14ರಿಂದ 16ರೂ. ಬೆಲೆತೆತ್ತೇ ಜನ ಬಹಿರಂಗ ಪೇಟೆಯಲ್ಲಿ ಎಣ್ಣೆ ಕೊಂಡುಕೊಳ್ಳಬೇಕಾಯಿತು. ಅಮದು ಎಣ್ಣೆ ಯಾವ ಪಡಿತರ ಪದ್ಧತಿಯ ಅಂಗಡಿಯಲ್ಲೂ ಸಿಗಲಿಲ್ಲ. ಹಾಗಾದರೆ ಈ ಎಣ್ಣೆ ಯಾವ ಕೊಳವೆಯಿಂದ ಎಷ್ಟು ಜನ ಕಳ್ಳಸಂತೆಖೋರರ ಗೋದಾಮು ಸೇರಿತು. ಅಮದು ಎಣ್ಣೆಯನ್ನು ವಿತರಣೆ ಮಾಡದೆ ಒಬ್ಬ ಎಣ್ಣೆ ವ್ಯಾಪಾರಿ ಒಳ್ಳೆಣ್ಣೆಯಲ್ಲಿ ಅದನ್ನು ಕೂಡಿಸಿ ಲಕ್ಷಾವಧಿ ರೂಪಾಯಿಗಳಿಸಿ ಸರಕಾರಕ್ಕೂ, ಸಾರ್ವಜನಿಕರಿಗೂ ಮೋಸಮಾಡುತ್ತಿದ್ದಾನೆಂದು ಬಿಜಾಪುರ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಜಿಲ್ಲಾಧಿಕಾರಿಗಳಿಗೆ ಲಿಖಿತ ಮೂಲಕ ತಿಳಿಸಿದ್ದರೂ, ಅಂಥವರ ಮೇಲೆ ಇಂದಿಗೂ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಇದರರ್ಥವೇನು? ಅಮದು ಖಾದ್ಯತೈಲ ಜನರ ಬಾಯಿಗೆ ಬೀಳುತ್ತದೆ. ಹೇಗೆ ಒಳ್ಳೆಣ್ಣೆಯ ಜೋಡಿ ಕಡಿಮೆ ದರದಲ್ಲಿಲ್ಲ, ಒಳ್ಳೆಣ್ಣೆಯ ಹೆಚ್ಚಿದ ಬೆಲೆಯಲ್ಲಿ. ಇದು ಬಡವರ ತಾಯಿ ಇಂದಿರಾ ಸರಕಾರದ ನೀತಿ. ಇದರ ವಿರುದ್ಧ ದೇಶಾದ್ಯಂತ ಹೋರಾಟ ನಡೆಯುತ್ತಿದೆ. ಅದನ್ನು ಬಲಪಡಿಸಿ ಈ ಸರಕಾರ ಕಿತ್ತೊಗೆಯಬೇಕಲ್ಲ. ಅದಕ್ಕೆ ನೀವೆಲ್ಲ ತಯಾರಾಗಬೇಕು.

ಪ್ರಥಮ ರಾಜ್ಯೋತ್ಸವ ಆಚರಿಸುವಾಗ (1956ರಲ್ಲಿ) ನಮ್ಮ ರಾಜ್ಯದಲ್ಲಿ ಆಹಾರ ಉತ್ಪಾದನೆ 33 ಲಕ್ಷ ಟನ್ ಇತ್ತು. ಬೆಳ್ಳಿಹಬ್ಬ ಆಚರಿಸುತ್ತಿರುವಾಗ ಅದು 172 ಲಕ್ಷ ಟನ್‌ಗಳಾಗಿದೆ. ಸರಕಾರದ ವರದಿ. 25 ವರ್ಷಗಳಲ್ಲಿ 139 ಲಕ್ಷ ಟನ್ ಆಹಾರಧಾನ್ಯ ಉತ್ಪಾದನೆ ಹೆಚ್ಚಾದಂತಾಯಿತು. ಪಡಿತರ ಅಂಗಡಿಗಳಲ್ಲಿ ಮಾರಾಟ ಮಾಡಲು ಸಾಕಷ್ಟು ಆಹಾರಧಾನ್ಯವಿದೆಂದು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಪದೇ ಪದೇ ಸಾರುತ್ತಿವೆ. ಆದರೆ ಪಡಿತರ ಅಂಗಡಿಗಳಲ್ಲಿ ಯಾವ ಆಹಾರ ಧಾನ್ಯವೂ, ಎಣ್ಣೆಯೂ ಸಿಗುತ್ತಿಲ್ಲ. ಸಿಕ್ಕಿದರೂ ಅರ್ಧ ಕಿ. ಜಿ. ರವೆ, ಅರ್ಧ ಕಿ. ಜಿ. ಗೋದಿ ಅಥವಾ ಅಕ್ಕಿ. ಹಾಗಾದರೆ ಉತ್ಪತ್ತಿಯಾಗುತ್ತಿರುವ ಆಹಾರಧಾನ್ಯ ಎಲ್ಲಿ ಮಾಯವಾಗುತ್ತಿದೆ. ಇಂದಿರಮ್ಮ ಚುನಾವಣೆಯಲ್ಲಿ ಗೆಲ್ಲಲು ಧನಸಹಾಯ ಮಾಡುವ ಕಳ್ಳಸಂತೆಖೋರರಲ್ಲೇ? ನೀವೇ ಕಂಡುಹಿಡಿಯಿರಿ.

●

ಚಂದಾ ವಿವರ

ಬಿಡಿ ಪ್ರತಿ	: 60ಪೈಸೆ
6 ತಿಂಗಳಿಗೆ	: 15ರೂ.
ವಾರ್ಷಿಕ ಚಂದಾ	: 30ರೂ..

ಭೂ - ಸುಧಾರಣಾ ಕಾಯಿದೆ

ಭೂ-ನ್ಯಾಯ ಮಂಡಳಿಗಳು ಸಾಧಿಸಿದ್ದೇನು?

ಕರ್ನಾಟಕ ಭೂ-ಸುಧಾರಣಾ ಕಾನೂನು 1974 ಮಾರ್ಚ್ 1 ರಿಂದ ಜಾರಿಗೆ ಬಂದಿರುತ್ತದೆ.

"ಉಳುವವನೇ ಹೊಲದೊಡೆಯ" ಎಂಬ ಘೋಷಣೆಯನ್ನು ಮುಂದಿಟ್ಟು ಕರ್ನಾಟಕದ ರೈತರು "ರೈತ ಸಂಘ"ದ ಮುಂದಾಳುತನದಲ್ಲಿ ಅನೇಕ ವರ್ಷಗಳಿಂದ ನಡೆಸಿದ ಚಳವಳಿ-ದ.ಕ. ಜಿಲ್ಲೆಯಿಂದ ಬೆಂಗಳೂರಿನ ತನಕ ಕಾಲ್ನಡಿಗೆ ರೈತರ ಜಾಥಾ, ಜಿಲ್ಲಾಧಿಕಾರಿಗಳ, ತಾಲ್ಲೂಕು ಕಚೇರಿಗಳ ಮುಂಭಾಗದಲ್ಲಿ ನೂರಾರು ಭಾರೀ ರೈತರ ಸತ್ಯಾಗ್ರಹ, ಸರಕಾರಕ್ಕೆ ನೂರಾರು ಮನವಿಗಳು-ಈ ಎಲ್ಲಾ ಚಳವಳಿಗಳು ನಡೆದದ್ದು "ಉಳುವವನಿಗೆ ಭೂಮಿಯ ಒಡೆತನ ಶಾಶ್ವತವಾಗಿ ದೊರೆಯಬೇಕೆಂಬುದೇ ರೈತರ ಮುಖ್ಯ ಕೇಳಿಕೆಯಾಗಿತ್ತು. ರೈತರ ಚಳವಳಿ ಬೆಳೆದು ಬರುತ್ತಿರುವುದನ್ನು ಕಂಡ ಕರ್ನಾಟಕ ಸರ್ಕಾರ 1974ರಲ್ಲಿ ಭೂ ಸುಧಾರಣಾ ಕಾಯಿದೆಯೊಂದನ್ನು ಜಾರಿಗೊಳಿಸಿತು.

ಈ ಕಾನೂನು ಯಾವ ಯಾವ ಭೂಮಿಗೆ ಅನ್ವಯಿಸುತ್ತದೆಯೆಂದು ಶಾಸನದಲ್ಲಿ ಈ ರೀತಿ ವಿವರಣೆ ಕೊಡಲಾಗಿದೆ.

1. ಹಣ್ಣು ಹಂಪಲು, ಹೂ ತೋಟ 2. ಧಾನ್ಯದ ಬೆಳೆ, ಹುಲ್ಲು, ತೋಟದ ಬೆಳೆ 3. ಹೈನು ಉದ್ಯಮ 4. ಕೋಳಿ ಸಾಕಣಿಕೆ 5. ಪಶು ಪಾಲನೆ ಮತ್ತು ಜಾನುವಾರುಗಳನ್ನು ಮೇಯಿಸುವುದು.

ಒಕ್ಕಲುತನದ ಅರ್ಜಿ ತನಿಖೆಯು ಭೂನ್ಯಾಯ ಮಂಡಳಿಗಳು

ಭೂ ಸುಧಾರಣಾಕಾಯಿದೆ ರಚನೆಯಾದ ಬಳಿಕ ಈ ಶಾಸನದಂತೆ "ಧನಿ-ಒಕ್ಕಲು" ಸಂಬಂಧದ ಅರ್ಜಿಗಳು ಭೂ ನ್ಯಾಯ ಮಂಡಳಿಗೆ ಒಕ್ಕಲು ಹಾಕತಕ್ಕದ್ದು. ಈ ಕಾಯಿದೆಯಲ್ಲಿ ಸೂಚಿಸಿದ ವಿವರಣೆಗಳಂತೆ ಈ ಒಕ್ಕಲಿಗರು ಹಾಕಿದ ಅರ್ಜಿಗಳ ತನಿಖೆ ನಡೆಸಲು ಸ್ಥಾಪನೆಗೊಂಡ ಭೂ ನ್ಯಾಯ ಮಂಡಳಿಗಳ ಸದಸ್ಯರನ್ನು ನೇಮಿಸುವಾಗ ವಿಚಿತ್ರ ರೀತಿಯ ನೀತಿಯನ್ನು ಕರ್ನಾಟಕ ಸರಕಾರ ಅನುಸರಿಸಿದೆ. ಒಕ್ಕಲಿಗರ, ರೈತರ ಕುರಿತು ಒಂದಿಷ್ಟು-ಆಧಾರದ ಅನುಭವವಿಲ್ಲದವರನ್ನು ಅದು ಕೂಡ ತನ್ನ ಪಕ್ಷದವರನ್ನೇ ತುಂಬಿಸಲಾಗಿದೆ. ಒಂದೇ ಪಕ್ಷಕ್ಕೆ (ಆಡಳಿತ ಪಕ್ಷಕ್ಕೆ) ಸೇರಿದ ಸದಸ್ಯರೇ ಇದ್ದ ಈ ನ್ಯಾಯ ಮಂಡಳಿಗಳಲ್ಲಿ ನಿಷ್ಪಕ್ಷಪಾತದ ತೀರ್ಮಾನ ಕೊಡುವ ಅ. ಕಮೀಶನರೊಬ್ಬರು (ಅಧ್ಯಕ್ಷರು) ಇದ್ದರೆ ಈ ಸದಸ್ಯರ ಅಭಿಪ್ರಾಯಕ್ಕೆ ಮನ್ನಣೆ ಕೊಡದೆ ನಿರ್ವಾಹವಿಲ್ಲದ ಪ್ರಸಂಗ ಕೂಡ ನಡೆದದ್ದು ಇದೆ. ಇದರಿಂದಾಗಿ ಅನೇಕ ಒಕ್ಕಲಿಗರಿಗೆ ಅನ್ಯಾಯವಾಗಿದ್ದನ್ನು ಕಾಣಬಹುದು. ಈ ನ್ಯಾಯ ಮಂಡಳಿಯ ಸದಸ್ಯತನ ಸಿಗಬೇಕಾದರೆ ಹತ್ತಾರು ಬಾರಿ ಬೆಂಗಳೂರಿಗೆ ಪ್ರಯಾಣ, ಮಂತ್ರಿಗಳಿಗೆ ಸಮೀಪದವರಿಂದ ಶಿಫಾರಸು ಪತ್ರಗಳ ಸುರಿಮಳೆ, ಇಂತಿಷ್ಟೇ "ಸಮಾಧಾನದ ಉಡುಗೊರೆ" ಕೊಡಬೇಕು, ಈ ಎಲ್ಲಾ ರೀತಿಯ ಕಿತಾಪತಿ ನಡೆದ ನಂತರವೇ ನ್ಯಾಯ ಮಂಡಳಿ ಸದಸ್ಯರಾಗಿ ನೇಮಕ. ತಾನು ವ್ಯಯ ಮಾಡಿದ ಹಣವನ್ನು ಈ ಸದಸ್ಯರು ತುಂಬಿಸುವುದಾದರೂ ಹೇಗೆ? ಕಳ್ಳಕೈಯಿಂದ ಪ್ರತಿಫಲ ಪಡೆಯದೆ ನಿರ್ವಾಹವಿಲ್ಲ. (ಇಂಥಾ ಪ್ರತಿಫಲ ತೆಗೆದುಕೊಂಡವರನ್ನು ಜಾಗೃತ ಆಯೋಗದ ಗಮನಕ್ಕೆ ತರಲು ಪ್ರಯತ್ನ ಮಾಡುವರೆಂಬ ಶಂಕೆಯಿಂದ ಈ ಸದಸ್ಯರು ನಡೆಸುವ ಭ್ರಷ್ಟಾಚಾರವನ್ನು ಈ ಕಾನೂನಿನಿಂದ ಹೊರತುಪಡಿಸಿದ್ದಾರೆಂದು ಜಾಗೃತ ಅಧಿಕಾರಿಗಳ ಸೂಚನೆ) ಈ ಸದಸ್ಯರಿಂದ ಒಕ್ಕಲಿಗರು ನ್ಯಾಯ ಪಡೆಯುವುದಾದರೂ ಹೇಗೆ?

ಭೂನ್ಯಾಯ ಮಂಡಳಿಯ ಕಾರ್ಯಾರಂಭ

ಭೂನ್ಯಾಯ ಮಂಡಳಿಗಳ ಕಾರ್ಯ ಆರಂಭವಾದೊಡನೆ ಒಕ್ಕಲಿಗರಿಗೆ ಕಾನೂನಿನ ಪ್ರಯೋಜನದ ಭ್ರಮೆ ನಿರಸನವಾಗಿದೆ. ದಿನಾ ಭೂಮಾಲೀಕರು ಸದಸ್ಯರ ಬೆನ್ನಹಿಂದೆ–ಮನೆಯ ಮುಂದೆ.

ಅನೇಕ ವರುಷಗಳಿಂದ ತನ್ನ ವಶದಲ್ಲಿದ್ದ ಸ್ಥಳವು ಕೈತಪ್ಪಿ ಹೋಗುವ ತೀರ್ಮಾನವು ಭೂನ್ಯಾಯ ಮಂಡಳಿಯಿಂದ ಹೊರಬಂತು.

ಉಳ್ಳಾಲದ 12ನೇ ಭೂನ್ಯಾಯ ಮಂಡಳಿಯ ಕೆಲವು ತೀರ್ಮಾನಗಳೇ ಇದಕ್ಕೆ ಸಾಕ್ಷಿ. 50 ವರ್ಷಗಳಿಗೂ ಮೇಲ್ಪಟ್ಟು ಸ್ವಾಧೀನವಿರುವ ಸ್ಥಳದಿಂದ 17 ಸೆಂಟ್ಸ್ ಸ್ಥಳ ಭೂಮಾಲಕರಿಗೆ. (ಈ ನ್ಯಾಯ ಮಂಡಳಿಯಲ್ಲಿ ಸ್ಥಳೀಯ ಸದಸ್ಯರಿದ್ದು, ಖುದ್ದು ಅನುಭವವುಳ್ಳವರು) ಸಿವಿಲ್ ವ್ಯಾಜ್ಯದಲ್ಲಿ 1974ರ ಮೊದಲು ಕೈತಪ್ಪಿ ಹೋದ ಭೂಮಿ ಪುನಃ ಸಿಗದೆ ಹೋಗುವ ತೀರ್ಪು, ಭೂಸುಧಾರಣಾ ಕಾಯಿದೆ ಸೆಕ್ಷನ್ 34-ಜನತಾ ಪಂಚಾಯತ್ ಮತ್ತು ಅದರ ಕಾರ್ಯನಿರ್ವಹಣೆ-9 ಇದರಂತೆ ಒಂದು ಭೂಮಿಗೆ ಸಂಬಂಧಿಸಿ ಎರಡು ಒಕ್ಕಲಿಗರ ಅರ್ಜಿ ಇದ್ದರೆ, ಇದರಲ್ಲಿ ನಿಜವಾದ ಒಕ್ಕಲು ಯಾರೆಂದು ತೀರ್ಮಾನಿಸುವುದು. ಸ್ಥಳದ ಒಂದು ಅಂಶಕ್ಕೆ ಮಾತ್ರ ಆಕ್ಷೇಪ ಇದ್ದು, ಇನ್ನೊಂದು ಅಂಶಕ್ಕೆ ಆಕ್ಷೇಪ ಇಲ್ಲದಿದ್ದರೆ ಈ ಭೂಮಿಯ ಬಗ್ಗೆ ತೀರ್ಪು ನೀಡಿ ಉಳಿದ ಅಂಶದ ಬಗ್ಗೆ ಪ್ರತ್ಯೇಕ ವಿಚಾರಣೆ ನಡೆಸುವುದು ಸಿವಿಲ್ ವ್ಯಾಜ್ಯದ ದಾಖಲೆಗಳಿದ್ದು ಅದನ್ನು ಹಾಜರುಪಡಿಸಲು ಅವಕಾಶ ಕೇಳಿ ಅರ್ಜಿ ಕೊಟ್ಟರೂ ಅದನ್ನು ನಿರಾಕರಿಸಿ ತೀರ್ಪು ನೀಡಲಾಗಿದೆ. ಒಂದೇ ಭೂಮಿಯಲ್ಲಿ ಪಾಲು ಮಾಡಿಕೊಂಡ ಒಪ್ಪಂದದ ದಾಖಲೆ ಇದ್ದರೂ, (ಭೂಮಾಲಕರು ಒಪ್ಪಿಗೆಯಿತ್ತರೂ) ಒಬ್ಬರಿಗೆ ಭೂಮಿಯೆಂದು ತೀರ್ಪು ಕೊಡಲಾಗಿದೆ.

ಭೂಮಿ ತನ್ನ ವಶದಲ್ಲಿಲ್ಲವೆಂಬ ನ್ಯಾಯವಾದ ಕಾರಣದಿಂದ ಅರ್ಜಿ ಹಾಕದಿದ್ದರೂ, ಅರ್ಜಿ ಹಾಕಿದ ರೈತನ ಭೂಮಿಯನ್ನು ಇನ್ನೊಬ್ಬ ರೈತನಿಗೆ ಕೊಡುವ ತೀರ್ಮಾನ. (ಕುಟುಂಬ ಸಂಬಂಧದ ಕಾರಣ ಕೊಟ್ಟು) ಭೂಮಿ ಒಕ್ಕಲಿನ ಸ್ವಾಧೀನವಿದ್ದು ಟ್ರಿಬ್ಯೂನಲ್‌ಗೆ ಅರ್ಜಿ ಹಾಕಿದ್ದಾನೆ. ಭೂಮಾಲಕರು ತನ್ನ ಸ್ವಾಧೀನವಿದೆ ಎಂದು ಹೇಳುವಾಗ ಸದಸ್ಯರು ಭೂಮಾಲಕನ ಕಡೆ ವಾದಿಸಿದ ಸಂದರ್ಭದಲ್ಲಿ ಧನಿ-ಒಕ್ಕಲು ಟ್ರಿಬ್ಯೂನಲ್ ಹೊರಗೆ ಆದ ಒಪ್ಪಂದದಂತೆ, "ಒಕ್ಕಲಿನ ಸ್ವಾಧೀನ ಭೂಮಿ" ಎಂದು ಭೂಮಾಲಕರು ಅರ್ಜಿ ಕೊಟ್ಟ ಬಳಿಕ ಒಕ್ಕಲಿನ ಪಾಲಿಗೆ ಭೂಮಿ ತೀರ್ಮಾನ.

ಇಂಥಾ ಅನೇಕ ರೀತಿಯ ಕಿರುಕುಳಗಳನ್ನು ಒಕ್ಕಲಿಗರು ಅನುಭವಿಸಿಯಾಗಿದೆ. ಈ ನ್ಯಾಯ ಮಂಡಳಿಯ ಸದಸ್ಯರು ಸಾವಿರಾರು ರೂಪಾಯಿ ಉಡುಗೊರೆಯಾಗಿ ಪಡೆದಿದ್ದಾರೆಂದು ರೈತರಾಡಿಕೊಳ್ಳುತ್ತಿದ್ದಾರೆ.

ಭೂಮಿ ತನ್ನ ಸ್ವಾಧೀನವಿದೆಯೆಂದು ತೀರ್ವೆ ರಶೀದಿ, ಗೇಣಿ ಕೊಟ್ಟ ದಾಖಲೆ ಮೊದಲಾದ ದಾಖಲೆ ಪತ್ರಕ್ಕೆ ಈ ಟ್ರಿಬ್ಯೂನಲ್‌ನ ತಿರಸ್ಕಾರ.

ಭೂಮಿಯ ಅನುಭೋಗದಾರನೆಂದು ತೀರ್ಮಾನ ಸಿಕ್ಕಿ 15 ವರುಷಗಳ ತನಕ ಸ್ಥಳವನ್ನು ಪರಾಧೀನ ಮಾಡಬಾರದೆಂದು ಈ ಕಾನೂನಿನಲ್ಲಿದ್ದರೂ ಈ ಟ್ರಿಬ್ಯೂನಲ್ ಸದಸ್ಯರೊಬ್ಬರು ಕಾನೂನಿನ ವಿರುದ್ಧ ಭೂಮಿ ಮಾರಾಟ.

ಟ್ರಿಬ್ಯೂನಲ್ ಸದಸ್ಯರೊಬ್ಬರಿಗೆ ದಿನವೊಂದಕ್ಕೆ ಶಾಸನಸಭಾ ಸದಸ್ಯರಿಗೆ ಸಿಗುವ ಭತ್ತೆ–ಪ್ರಯಾಣ ಭತ್ತೆ ಕೂಡಾ ಸಿಗುವಾಗ ಇಂಥ ಭ್ರಷ್ಟಾಚಾರವೆಸಗಿದರೂ ಆಶ್ಚರ್ಯಪಡಬೇಕಾಗಿಲ್ಲ. ಇದು ಮೇಲಿನಿಂದ ಕೆಳಗಿನ ತನಕದ ಕ್ರಮ. ಆದರೆ ಒಕ್ಕಲೊಬ್ಬರಿಗೆ ನ್ಯಾಯವಾಗಿ ಭೂಮಿಯ ಹಕ್ಕುದಾರನೆಂದು ತೀರ್ಮಾನಿಸಬೇಕಾದರೆ ಇಂತಿಷ್ಟೇ ರೂಪಾಯಿ ಕೊಡಬೇಕೆಂದು ಕೇಳಿಕೆ ಮುಂದಿಡುವುದು ಕಾಂಗ್ರೆಸ್ ಆಡಳಿತೆಯ ಮಾದರಿಯೆಂದು ಹೇಳಬೇಕಾಗಿದೆ.

ಮಂತ್ರಿಗಳ ಗಮನಕ್ಕೂ ತರಲಾಯಿತು

ನಿಜವಾದ ಒಕ್ಕಲಿಗರಿಗೆ ಟ್ರಿಬ್ಯೂನಲ್‌ನಿಂದ ಅನ್ಯಾಯವಾದರೆ ಅದನ್ನು ತಿಳಿಸಿದಲ್ಲಿ ಸರಿಪಡಿಸಲಾಗುವುದೆಂದು ಮಾನ್ಯ ಮಂತ್ರಿ ಶ್ರೀ ವೀರಪ್ಪ ಮೊಯ್ಲಿಯವರು ದ. ಕನ್ನಡದ ಸಂಚಾರದ (1981-ಸೆಪ್ಟೆಂಬರ್) ವೇಳೆ ಸಾರಿದರು. ಈ ಹೇಳಿಕೆಯಂತೆ ಉಳ್ಳಾಲದ ಒಕ್ಕಲೊಬ್ಬರು ಮಾನ್ಯ ಮಂತ್ರಿಗಳಿಗೆ ತನ್ನ ಭೂಮಿ ಕೈತಪ್ಪಿಹೋದ ಬಗ್ಗೆ ಬರೆದು ತಿಳಿಸಿದರು. ಮಾನ್ಯ ಮಂತ್ರಿಯವರ ಭಾಷಣ ಪತ್ರಿಕೆಯಲ್ಲಿ ಓದಿ ಮಾತ್ರ ಸಮಾಧಾನ ಪಡಬೇಕಾಯಿತು.

ಭೂಸುಧಾರಣಾ ಕಾಯಿದೆ ಬಗ್ಗೆ ರೈತಸಂಘವು ಮೊದಲೇ ತಿಳಿಸಿದಂತೆ, ರೈತರಿಗೆ ಮೋಸಮಾಡುವ ಉದ್ದೇಶದ ಈ ಕಾಯಿದೆ ಮಾಡಿದರೂ, ಇದರಿಂದ ಸಿಗುವ ಪ್ರಯೋಜನ ಪಡೆದು, ತಮ್ಮ ಕೈತಪ್ಪಿಹೋದ ಭೂಮಿಗಾಗಿ ಒಗ್ಗಟ್ಟಿನಿಂದ ಚಳುವಳಿ ನಡೆಸಿ ಭೂಮಾಲೀಕರ ಪ್ರವೇಶವನ್ನು ಒಗ್ಗಟ್ಟಿನ ಮೂಲಕ ಪ್ರತಿಭಟಿಸಲು ಸಿದ್ಧರಾಗಬೇಕಾಗಿದೆ. ಹೈಕೋರ್ಟ್ ಮೆಟ್ಟಲೇರಲು ಊಟಕ್ಕಿಲ್ಲದ ಒಕ್ಕಲಿಗರಿಗೆ ಸಾಧ್ಯವಲ್ಲಿಂದ?

–ಪಾ ಸೊ.

ಕೊಡುವವನಿಗೆ, ಕೊಳ್ಳುವವನಿಗೆ ಎರಡು ಬಗೆದ

ಬತ್ತದ ಲೆವಿ ದೋರಣೆ

-ಕೆ. ವಿ. ರಾವ್

ಬೆಳೆಸಿದ ಬತ್ತವನ್ನು ಮಾರುವ ರೈತನಿಗೆ, ಪೇಟೆಯಿಂದ ಅಕ್ಕಿ ಕೊಳ್ಳುವ ಜನಸಾಮಾನ್ಯನಿಗೆ ಇಂದು ಉಳಿಗಾಲವಿಲ್ಲದಂತಾಗಿದೆ. ಮಾಮೂಲಿನ ವ್ಯಾಪಾರಿ ದೋರಣೆಯಂತೇ ರೈತರು ಬೆಳೆಸಿದ ಬತ್ತ, ಕಾಳುಕಡ್ಡಿ ಪೇಟೆಗೆ ಮಾರಲು ಬಂದಾಗ ಬೆಲೆ ಸಿಕ್ಕುತ್ತಾ ಇಲ್ಲ. ಅದು ಭಾರೀ ಹಳೆಯ ಅಭ್ಯಾಸ. ಯಾರದೋ ಗೋಣಿ ಮುರಿದು ಗೋಣಿ ತುಂಬಿಸಿಕೊಳ್ಳುವ ಜನ ವ್ಯಾಪಾರಿಗಳು. ಆದರೆ ಈ ಸರಕಾರದ ಬುದ್ಧಿಯೂ ಅಷ್ಟೇ ಅಂದಾಗ ಯಾರೂ ಮರುಕ ತಾಳಬೇಕು. ಕ್ವಿಂಟಾಲ್ ಬತ್ತ 150 ರಿಂದ 200 ರೂ. ಇದ್ದಾಗ ಸರಕಾರ ಒಮ್ಮೆಲೇ ತನ್ನ ಬೆಲೆ 115 ಅಂತ ಘೋಷಿಸಿತು. ಈ ಬಗೆಗೆ ಅದು ರೈತರ ಅಭಿಪ್ರಾಯವೇನೆಂಬುದನ್ನು ತಿಳಿಯುವ ಗೋಜಿಗೆ ಹೋಗಲಿಲ್ಲ. ಅಲ್ಲದೆ ಇತರ ಸಾಮಾನುಗಳ ಮುಖ್ಯವಾಗಿ ಜೀವನಾವಶ್ಯಕ ವಸ್ತುಗಳ ಬೆಲೆ ಎಷ್ಟೇರಿದೆ ಎಂಬುದನ್ನೂ ಯೋಚಿಸಲಿಲ್ಲ. ಯಾವುದೋ ಅಂಕಿ ಸಂಖ್ಯೆಗಳ ಮೇಲೆ, ವರದಿಗಳ ಮೇಲೆ ಅದು ಅವಲಂಬಿಸಿರಬೇಕೇನೋ? ಆದರೆ ಬೆಲೆ ಅಂದರೆ ಬೆಲೆತಾನೇ? ರೈತರು ಮಳೆಗಾಲದ ದಿನವೆಲ್ಲಾ ಹೊಟ್ಟೆಬಾಯಿಕಟ್ಟಿ ಹೊಲದ ಪೈರು ಮಾಗಿದಾಗ ಬತ್ತ ಹೊತ್ತುಕೊಂಡು ಪೇಟೆಗೆ ಬಂದಾಗ ದಿನಾ ಹತ್ತು ಇಪ್ಪತ್ತರಂತೇ ಬೆಲೆ ತಗ್ಗುವುದಕ್ಕೆ ಆರಂಭ. ಈ ಎರಡುಮೂರು ದಶಕಗಳಲ್ಲಿ ಯಾವ ವಸ್ತುವಿಗೂ ಬೆಲೆತಗ್ಗಿಲ್ಲ. ತಗ್ಗಿಸುವ ಅಭ್ಯಾಸನೇ ಮರೆತು ಹೋಗಿದೆ ನಮ್ಮ ವ್ಯಾಪಾರಿಗಳಿಗೆ. ಆದರೆ ರೈತರ ಬತ್ತ, ಧಾನ್ಯಗಳ ಮಟ್ಟಿಗೆ ಮಾತ್ರ ಈ ಏರುತಗ್ಗು ಅನ್ವಯಿಸುತ್ತಾ ಇಲ್ಲ. ಬತ್ತದ ಬೆಲೆಯು ಮಾರುಕಟ್ಟೆಯಲ್ಲಿ ಬತ್ತ ಬಂದಾಗಲೆಲ್ಲಾ ಹೀಗೇ. ಕಟಾವಿನ ಸಮಯಕ್ಕೆ ಹತ್ತು ಇಪ್ಪತ್ತು ಕ್ವಿಂಟಾಲ್‌ನಲ್ಲಿ ದಿನದಿನವೂ ಕಡಿಮೆ. ಅದನ್ನು ಹೇಳುವವರು ಕೇಳುವವರು ಯಾರೂ ಇಲ್ಲ. ಬತ್ತದ ಪ್ರಾಮುಖ್ಯ ಬೆಳೆ ಕನ್ನಡ ಜಿಲ್ಲೆಯದು. ಈಗ ಕ್ವಿಂಟಾಲಿಗೆ 120/- ಅಥವಾ 125ರಿಂದ ಬತ್ತದ ಬೆಲೆ ಹೆಚ್ಚಿಗೆಯಾಗಿಲ್ಲ. ಒಂದೇ ತಿಂಗಳಲ್ಲಿ ಅದು 50 ರೂಪಾಯಿಗಳಷ್ಟು ಕ್ವಿಂಟಾಲಿನಲ್ಲಿ ಇಳಿದಿದೆ. ಈ ಬೆಲೆ ಬತ್ತದ ಕೃಷಿಯ ವೆಚ್ಚದ ಏರಿಕೆಯಲ್ಲಿ ಬಲುದೊಡ್ಡ ಆಘಾತವಾಗಿದೆ.

ಸರಕಾರದ ಸಹಾಯ

ಬತ್ತದ ವ್ಯಾಪಾರಕ್ಕೆ ಸರಕಾರ ಕಣ್ಮುಚ್ಚಿ ಸಹಾಯಮಾಡಿದೆ. ಅದರ ಕಪ್ಪು ಮಾರುಕಟ್ಟೆಯ ಕಡೆಗೆ ಅದರದು ಎತ್ತಿದ ಕೈಯ ಆಶೀರ್ವಾದ. ಬತ್ತದ ಬೆಲೆ ಕ್ವಿಂಟಾಲಿಗೆ 115ಕ್ಕೆ ಇಳಿಸಿದ ಸರಕಾರ ಅದನ್ನು ಏರದಂತೇ ಮಾಡಲು ಭಾರೀ ದೊಡ್ಡ ಹಿಕ್ಮತ್ತು ಮಾಡಿದೆ. ಈ ವೇಳೆಗೆ ರೈತರು ಲೆವಿಬತ್ತ ತೆರಬೇಕಾಗಿಲ್ಲ. ಅದನ್ನು ವ್ಯಾಪಾರಿಗಳಿಂದಲೇ ಅದು ವಸೂಲು

(6ನೇ ಪುಟ ನೋಡಿ)

ಸರಕಾರಕ್ಕೆ ಪಕ್ಷದ ರಾಜ್ಯಸಮಿತಿಯ ಒತ್ತಾಯ

ಗೋಕಾಕ್ ವರದಿ ಜಾರಿಗೊಳಿಸಿ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯಸಮಿತಿಯು ಅಕ್ಟೋಬರ್ 26, 27 ಮತ್ತು 28 ರಂದು ಬೆಂಗಳೂರಿನಲ್ಲಿ ಸೇರಿ ರಾಜ್ಯದ ರಾಜಕೀಯ ಪರಿಸ್ಥಿತಿ, ಸಂಘಟನೆ, ಪಕ್ಷದ ರಾಜ್ಯ ಮತ್ತು ಜಿಲ್ಲಾ ಸಮ್ಮೇಳನಗಳ ಬಗ್ಗೆ ಚರ್ಚಿಸಿತು. ಕಾಮ್ರೇಡ್ ಸಿ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಗೋಕಾಕ್ ವರದಿ

ಹೈಯರ್ ಸೆಕೆಂಡರಿ ಸ್ಕೂಲ್‌ಗಳಲ್ಲಿ ಸಂಸ್ಕೃತದ ಸ್ಥಾನದ ಬಗ್ಗೆ ಗೋಕಾಕ್ ಸಮಿತಿಯು ಕೊಟ್ಟಿರುವ ವರದಿಯನ್ನು ವಿಮರ್ಶಿಸಿದ ರಾಜ್ಯಸಮಿತಿಯು ಗೋಕಾಕ್ ಸಮಿತಿ ಸಲಹೆಯು ಸೂಕ್ತವಾದುದು ಎಂದು ಅಭಿಪ್ರಾಯ ಪಟ್ಟಿತು. ಮಾತೃಭಾಷೆ ಮತ್ತು ಜನಭಾಷೆಯಾಗಿರುವ ಕನ್ನಡಕ್ಕೆ ಮಾತ್ರ ಪ್ರಥಮ ಸ್ಥಾನ ಕೊಡಬೇಕೆಂದೂ, ಇಂದಿನ ಪರಿಸ್ಥಿತಿಗೆ ಅಸಮಂಜಸವಾದ ಹಳೆಯ ಸಂಸ್ಕೃತವನ್ನು ಪ್ರಥಮ ಭಾಷೆಯನ್ನಾಗಿ ಮಾಡುವುದೆಂದರೆ "ಪುರೋಹಿತಶಾಹಿ ಸಂಸ್ಕೃತಿ"ಯನ್ನು ಜನತೆಯ ಮೇಲೆ ಹೇರಿದಂತೆ ಆಗುವುದೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿಯು ಅಭಿಪ್ರಾಯ ಪಡುತ್ತದೆ. ಗೋಕಾಕ್ ಸಮಿತಿ ವರದಿಯ ಸಲಹೆಗಳನ್ನು ಜಾರಿ ಮಾಡುವುದಕ್ಕೆ ಹಿಂದೇಟು ಹಾಕುತ್ತಿರುವುದಕ್ಕೆ ಮತ್ತು ಅದರಲ್ಲಾಗುವ ಸಲಹೆಗಳನ್ನು ಕಡೆಗಣಿಸಲು ನಡೆಸುವ ಪ್ರಯತ್ನಗಳ ಬಗ್ಗೆ ಗುಂಡೂರಾವ್ ಸರಕಾರವನ್ನು ರಾಜ್ಯ ಸಮಿತಿಯು ಖಂಡಿಸಿತು. ಮತ್ತು ಈ ಕ್ಷಣದಿಂದಲೇ ಗೋಕಾಕ್ ಸಮಿತಿ ಸಲಹೆಯನ್ನು ಕಾರ್ಯಗತಗೊಳಿಸಲು ಸರಕಾರವನ್ನು ಒತ್ತಾಯಿಸಿತು.

"ಕನ್ನಡ ರಾಜ್ಯೋತ್ಸವದ ಬೆಳ್ಳಿ ಹಬ್ಬವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ಸೇರಿರುವ ಸಿ.ಪಿ.ಐ.(ಎಂ) ರಾಜ್ಯಸಮಿತಿಯು ಕರ್ನಾಟಕ ರಾಜ್ಯವು ಅಸ್ತಿತ್ವಕ್ಕೆ ಬಂದು 25 ವರ್ಷಗಳಾದರೂ ಕನ್ನಡವನ್ನು ಶಿಕ್ಷಣದ ಎಲ್ಲಾ ಹಂತಗಳಲ್ಲೂ ಮತ್ತು ಸರಕಾರಿ ಭಾಷೆಯನ್ನಾಗಿಯೂ ಬಳಸಿಕೊಳ್ಳುವಂತೆ ಮಾಡುವುದರಲ್ಲಿ ಸರ್ಕಾರವು ಸಂಪೂರ್ಣ ವಿಫಲವಾಗಿದ್ದಕ್ಕೆ ಬೇಸರಪಟ್ಟಿತು. ಬೆಳ್ಳಿ ಹಬ್ಬವನ್ನು ಆಚರಿಸುವ ಈ ಸಂದರ್ಭದಲ್ಲಿ ಬಹುಪಾಲು ಜನರು ಅನಕ್ಷರಸ್ಥರಾಗಿರುವುದು, ರಾಜ್ಯದಾದ್ಯಂತ ಹಲವಾರು ಕನ್ನಡ ಶಾಲೆಗಳು ಮುಚ್ಚಬೇಕಾದ ಪರಿಸ್ಥಿತಿಯಲ್ಲಿರುವುದು, ಈ ವಿಚಾರದಲ್ಲಿ ಸರಕಾರದ ಅಸಡ್ಡೆಯನ್ನು ಖಂಡಿಸಿದ ಸಿ.ಪಿ.ಐ.(ಎಂ) ರಾಜ್ಯಸಮಿತಿಯು, ಇನ್ನಾದರೂ ಈ ದಿಸೆಯಲ್ಲಿ ಸರಕಾರವು ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಳ್ಳಲು ಒತ್ತಾಯಿಸಿತು.

ಸಂಯುಕ್ತ ಚಳುವಳಿ

ರಾಜ್ಯದ ರಾಜಕೀಯ ಪರಿಸ್ಥಿತಿಯನ್ನು ವಿಮರ್ಶಿಸಿದ ಸಿ.ಪಿ.ಐ.(ಎಂ) ರಾಜ್ಯಸಮಿತಿಯು ಭಾರತ ಕಮ್ಯುನಿಸ್ಟ್ ಪಕ್ಷದ ರಾಜ್ಯ ಘಟಕದೊಂದಿಗೆ ಸೇರಿ ಜಂಟೀ ಕಾರ್ಯಕ್ರಮಗಳನ್ನು ನಡೆಸಬೇಕೆಂದು, ಸೆಕ್ರೆಟಾರಿಯೆಟ್ ಕೊಟ್ಟಿರುವ ಅಭಿಪ್ರಾಯವನ್ನು ಮಂಜೂರು ಮಾಡಿತು. ಸಿ.ಪಿ.ಐ. ಮತ್ತು ಸಿ.ಪಿ.ಐ.(ಎಂ) ಪಕ್ಷಗಳು ಜನತೆಯನ್ನು ತುರ್ತಾಗಿ ಬಾಧಿಸುತ್ತಿರುವ ಸಮಸ್ಯೆಗಳ ಬಗ್ಗೆ ಜಂಟೀ ಪ್ರಚಾರ ಮತ್ತು ಜನರ ಚಳುವಳಿಗಳನ್ನು ಸಂಘಟಿಸಲು ಮುಂದಾದಲ್ಲಿ ರಾಜ್ಯದಲ್ಲಿ ಎಡ ಪ್ರಜಾಪ್ರಭುತ್ವ ಶಕ್ತಿಗಳು ಒಗ್ಗೂಡಲೂ ಸಹಕಾರಿಯಾಗುವುದು ಎಂದು ರಾಜ್ಯಸಮಿತಿಯು ಅಭಿಪ್ರಾಯ ಪಟ್ಟಿತು.

ದಾಂಡೇಲಿ ಪೋಲೀಸ್ ದೌರ್ಜನ್ಯ

ದಾಂಡೇಲಿಯಲ್ಲಿ ಇತ್ತೀಚೆಗೆ ಪೋಲೀಸರು ನಡೆಸಿರುವ ದೌರ್ಜನ್ಯವನ್ನು ಮತ್ತು ಸರಕಾರದ ಕಾರ್ಮಿಕ ವಿರೋಧಿ ದಮನಕಾರಿ ಧೋರಣೆಗಳನ್ನು ರಾಜ್ಯ ಸಮಿತಿಯು ಖಂಡಿಸಿತು. ಪೋಲೀಸು ಅಧಿಕಾರಿಗಳು ಮತ್ತು ಸರಕಾರ ಈ ದಮನಕಾರಿ ಕ್ರಮಗಳನ್ನು ನಿಲ್ಲಿಸದಿದ್ದಲ್ಲಿ ಎಡ ಪ್ರಜಾಪ್ರಭುತ್ವ ಶಕ್ತಿಗಳೊಡಗೂಡಿ ಸಿ.ಪಿ.ಐ.(ಎಂ) ರಾಜ್ಯದಾದ್ಯಂತ ಚಳುವಳಿ ನಡೆಸುವುದು ಎಂದು ಸರಕಾರಕ್ಕೆ ಎಚ್ಚರಿಕೆ ಕೊಡಲಾಯಿತು.

ಪಕ್ಷದ ಸಮ್ಮೇಳನ

ಪಕ್ಷದ ರಾಜ್ಯ ಸಮ್ಮೇಳನವನ್ನು 1981 ಡಿಸೆಂಬರ್ 11 ರಿಂದ 14ರ ತನಕ ಮಂಗಳೂರಿನಲ್ಲಿ ನಡೆಸಲು ನಿರ್ಣಯಿಸಲಾಯಿತು. ಅದಕ್ಕೆ ಪೂರ್ವಭಾವಿಯಾಗಿ ಪಕ್ಷದ ಜಿಲ್ಲಾ ಸಮ್ಮೇಳನಗಳನ್ನು ನಡೆಸಲು ನಿರ್ಣಯಿಸಲಾಯಿತು.

○

ಪಡಿತರ ಅವ್ಯವಸ್ಥೆ ಪ್ರತಿಭಟಿಸಿ

ಭಾರೀ ಪ್ರದರ್ಶನ

ಭ್ರಷ್ಟಾಚಾರಕ್ಕೆ ಹಾಗೂ ಅದಕ್ಷತೆಗೆ ಪರ್ಯಾಯ ನಾಮವೆನಿಸಿದ ಆಹಾರ ಸರಬರಾಜು ಇಲಾಖೆಯ ವಿರುದ್ಧ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಅಕ್ಟೋಬರ್ 23 ರಂದು ಬೆಂಗಳೂರಿನಲ್ಲಿ ಭಾರೀ ಪ್ರದರ್ಶನ ನಡೆಸಲಾಯಿತು.

ಆಳುವ ಪಕ್ಷದೊಡನೆ ಅಪವಿತ್ರ ವ್ಯವಹಾರ ನಡೆಸಿ ಸರ್ಕಾರವನ್ನು ಬಗಲಿಗೆ ಹಾಕಿಕೊಂಡಿರುವ ಪಾತಕಿ ವ್ಯಾಪಾರಿಗಳು ಜೀವನಾವಶ್ಯಕ ಸಾಮಗ್ರಿಗಳ ಬೆಲೆಗಳನ್ನು ಏರಿಸುತ್ತಿದ್ದಾರೆ. ಇಷ್ಟಲ್ಲದೆ ಸರಕಾರವೂ ವಿಚಾರಹೀನತೆಯಿಂದ ವರ್ತಿಸಿ ರೇಷನ್ ಸಾಮಗ್ರಿಗಳ ಬೆಲೆ ಏರಿಸಿದೆ. ಇದು ಮುಕ್ತ ಮಾರುಕಟ್ಟೆಯ ಬೆಲೆಗಳ ಮೇಲೆ ದುಷ್ಪರಿಣಾಮ ಬೀರಿದೆ.

ರಾಜ್ಯದ ಪಡಿತರ ವ್ಯವಸ್ಥೆಯ ಶೋಚನೀಯ ಪರಿಸ್ಥಿತಿಯನ್ನು ಪ್ರತಿಭಟಿಸಿ ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿ ಬೃಹತ್ ಮೆರವಣಿಗೆ ಮತ್ತು ಪ್ರದರ್ಶನ ಏರ್ಪಡಿಸಿದ್ದು ಸ್ವಾಗತಾರ್ಹ.

23ರಂದು ಸಾವಿರಕ್ಕೂ ಮಿಕ್ಕಿ ಮಾರ್ಕ್ಸ್‌ವಾದಿ ಪಕ್ಷದ ಕಾರ್ಯಕರ್ತರು ಮೈಸೂರು ಬ್ಯಾಂಕ್ ವೃತ್ತದಿಂದ ಮೆರವಣಿಗೆ ಹೊರಡಿಸಿ ಆಹಾರ ಸರಬರಾಜು ಇಲಾಖೆಯ ಕಚೇರಿ ಎದುರು ಧರಣಿ ನಡೆಸಿದರು. ಪಕ್ಷದ ಜಿಲ್ಲಾ ಸೆಕ್ರೆಟಾರಿಯೇಟ್ ಸದಸ್ಯರಾದ ಕಾಂ. ಆರ್. ಶ್ರೀನಿವಾಸ, ಪಿ. ಕೆ. ಸುಬ್ರಮಣಿ ಇವರನ್ನೊಳಗೊಂಡ ನಿಯೋಗವೊಂದು ಆಹಾರ ಸರಬರಾಜು ಇಲಾಖೆಯ ಜಾಯಿಂಟ್ ಡೈರೆಕ್ಟರ್‌ರನ್ನು ಭೇಟಿಯಾಗಿ ಪಡಿತರ ಅವ್ಯವಸ್ಥೆಯ ಕುರಿತು ಮನವಿ ಸಲ್ಲಿಸಿತು.

ಪಡಿತರ ಪ್ರಮಾಣವನ್ನು ಹೆಚ್ಚಿಸುವ, ಸರಿಯಾದ ಸಮಯಕ್ಕೆ ಆಹಾರ ಸಾಮಗ್ರಿಗಳನ್ನು ಪೂರೈಸುವ ದಿಸೆಯಲ್ಲಿ ಪ್ರಯತ್ನಿಸುವೆನೆಂದು ಜಾಯಿಂಟ್ ಡೈರೆಕ್ಟರರು ನಿಯೋಗಕ್ಕೆ ಭರವಸೆ ನೀಡಿದ್ದಾರೆ. ●

ಜನತೆಯನ್ನು ಬಾಧಿಸುತ್ತಿರುವ ಸಮಸ್ಯೆಗಳ ಕುರಿತು ಹೋರಾಟಕ್ಕೆ

ಉಭಯ ಕಮ್ಯುನಿಸ್ಟ್ ಪಕ್ಷಗಳ ನಿರ್ಧಾರ

ಜನತೆಯನ್ನು ಅತಿಯಾಗಿ ಬಾಧಿಸುತ್ತಿರುವ ಬೆಲೆಏರಿಕೆ ಮುಂತಾದ ಸಮಸ್ಯೆಗಳ ಕುರಿತು ಜಂಟೀ ಹೋರಾಟಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಭಾರತ ಕಮ್ಯುನಿಸ್ಟ್ ಪಕ್ಷಗಳು ನಿರ್ಧರಿಸಿವೆ. ಅಕ್ಟೋಬರ್ 28ರಂದು ಬೆಂಗಳೂರಿನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯವನ್ನು ಸಿ. ಪಿ. ಐ. ನ ಕಾರ್ಯದರ್ಶಿ ಕಾಂ. ಎಂ. ಎಸ್. ಕೃಷ್ಣನ್ ಮತ್ತು ಸಿ.ಪಿ.ಐ.(ಎಂ)ನ ಕಾರ್ಯದರ್ಶಿ ಕಾಂ. ಎಂ.ಕೆ.ಭಟ್ ತಿಳಿಸಿದರು.

ಕರ್ನಾಟಕದಲ್ಲಿ ದಿಸೆಯಿಲ್ಲದ ಹಾಗೂ ಉದ್ದೇಶವಿಲ್ಲದ ಸರಕಾರವಿದೆ. ಜನತೆಗೆ ಆಶ್ವಾಸನೆಗಳನ್ನು ಹೇರಳವಾಗಿ ಕೊಡಲಾಗುತ್ತಿದೆಯಾದರೂ ಅವುಗಳು ಜಾರಿಯಾಗಿಲ್ಲ. ತಮ್ಮ ಬೇಡಿಕೆಗಳಿಗಾಗಿ ಅಭೂತಪೂರ್ವ ಹೋರಾಟ ನಡೆಸಿ ಹಲವಾರು ಜೀವಗಳನ್ನು ಬಲಿತೆತ್ತ ನರಗುಂದ, ನವಲಗುಂದ ಹಾಗೂ ಇತರೆಡೆಗಳ ರೈತರಿಗೆ ಹಲವಾರು ರಿಯಾಯಿತಿಗಳನ್ನು ನೀಡುವುದಾಗಿ ಘೋಷಿಸಿದ್ದರೂ ಅವುಗಳಲ್ಲಿ ಅನೇಕವು ಇನ್ನೂ ಶೀತಾಗಾರದಲ್ಲಿವೆ. ರೈತರ ಉತ್ಪನ್ನಕ್ಕೆ ನ್ಯಾಯ ಬೆಲೆ ಇಲ್ಲ; ಕೃಷಿಕಾರ್ಮಿಕರಿಗೆ ಸೂಕ್ತ ಕನಿಷ್ಟಕೂಲಿ ನಿಗದಿಯಿಲ್ಲ; ಹೆಚ್ಚುವರಿ ಭೂಮಿಯ ವಿತರಣೆ ಇಲ್ಲ; ಭೂನ್ಯಾಯ ಮಂಡಳಿಗಳಲ್ಲಿ ವ್ಯಾಪಕ ಭ್ರಷ್ಟಾಚಾರ ಹಾಗೂ ಅನ್ಯಾಯ ನಡೆಯುತ್ತಿದೆ; ಈ ಎಲ್ಲ ಸಮಸ್ಯೆಗಳ ಪರಿಹಾರಕ್ಕಾಗಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳೊಡನೆ ಜೊತೆಗೂಡಿ ಹೋರಾಟ ಕೈಗೊಳ್ಳಲು ಕಾರ್ಯಕ್ರಮ ರೂಪಿಸಲಿದ್ದೇವೆ ಎಂದು ಉಭಯ ಪಕ್ಷಗಳ ಕಾರ್ಯದರ್ಶಿಗಳು ತಿಳಿಸಿದರು.

ರಾಜ್ಯದ ಜನತಾಪಕ್ಷ, ಕಾಂಗ್ರೆಸ್ (ಎಸ್) ಮತ್ತು ಲೋಕದಳ ಪಕ್ಷಗಳೂ ಈ ಪ್ರಯತ್ನಕ್ಕೆ ಸಹಕರಿಸಿ, ಜನತೆಯ ಸಂಘಟಿತ ಪ್ರಜಾಪ್ರಭುತ್ವ ಚಳುವಳಿಗಳನ್ನು ನಡೆಸಲು, ಜನತೆಯ ಅಸಂತೋಷಕ್ಕೆ ಕಾರಣವಾಗಿರುವ ಕಾಂಗ್ರೆ(ಐ) ದುರಾಡಳಿತದ ವಿರುದ್ಧ ಹೋರಾಡಲು ಮುಂದೆ ಬರಲೆಂದು ಕಾಂ. ಎಂ. ಕೆ. ಭಟ್ ಮತ್ತು ಕಾಂ. ಎಂ. ಎಸ್. ಕೃಷ್ಣನ್ ಆಶಿಸಿದ್ದಾರೆ.

●

ಬತ್ತದ ಲೆವಿ ಧೋರಣೆ

(5ನೇ ಪುಟದಿಂದ)

ಮಾಡುತ್ತಿದೆ. ಧಾನ್ಯದ ವ್ಯಾಪಾರಿಗಳು ನಮ್ಮ ದೇಶದಲ್ಲಿಯೇ ಬಲು ಮೋಸ. ಸರಕಾರದ ಮೂಗಿನಡಿಯಲ್ಲಿ ಬೆಲ್ಲಹಚ್ಚುವುದರಲ್ಲಿಯಂತೂ ಅವರು ಭಲೇ ಖದೀಮರು. ಸರಕಾರ ಬಡ ರೈತರಿಗೆ ಪಾಠಕಲಿಸಿದಂತೇ ಧಾನ್ಯದ ಠೋಕ ವ್ಯಾಪಾರಿಗಳಿಗೆ ಕಲಿಸುವುದು ಎಂದೂ ಸಾಧ್ಯವಿಲ್ಲ. ಇನ್ನೆಷ್ಟು ಲೆವಿ ಸರಕಾರ ಅವರಿಂದ ವಸೂಲು ಮಾಡುತ್ತೋ ನಾವು ಕಾದುನೋಡಬೇಕು. ಬಹಳ ಲಾಭದಾಯಕವಾದ ಬತ್ತದ ವ್ಯಾಪಾರದಲ್ಲಿ ಸರಕಾರದ ಅಪ್ರತ್ಯಕ್ಷ ಕೈಯಿದೆ ಅನ್ನುವುದಕ್ಕೆ ಇಂದೂ ಅಕ್ಕಿಗೆ ಕೆ. ಜಿ. 3 ರೂಪಾಯಿಗಳ ಬೆಲೆ ಇರುವುದೇ ಸಾಕ್ಷಿ. ಬತ್ತ ನೂರಹದಿನೈದಕ್ಕೆ ತಗೋಬೇಕು ಅಂದ ಸರಕಾರ ಅಕ್ಕಿಗೆ ಇನ್ನೂ ಕೆ. ಜಿ.ಗೆ 3ರ ದರವೇಕೆ ಇಟ್ಟಿದೆ? ಒಂದು ಕಿಂಟಾಲ್ ಬತ್ತದಲ್ಲಿ 75-80 ಕೆ. ಜಿ. ಅಕ್ಕಿ ಉತ್ಪಾದನೆಯಾಗುತ್ತಿರುವಾಗ ಬತ್ತದ ವ್ಯಾಪಾರಿಗೆ ಒಂದು ಕ್ವಿಂಟಾಲ್ ಬತ್ತವನ್ನು ಅಕ್ಕಿಯಾಗಿ ಪರಿವರ್ತಿಸಿ ಮಾರುಕಟ್ಟೆಗೆ ತಂದಾಗ 100–125 ರೂಪಾಯಿಗಳಷ್ಟು ಲಾಭವೆ? ಇದರಿಂದ ಒಂದೆಡೆಯಿಂದ ರೈತನಿಗೂ, ಇನ್ನೊಂದೆಡೆಯಿಂದ ಅಕ್ಕಿಯನ್ನು ಕೊಂಡು ಉಣ್ಣುವವನಿಗೂ ಹೊಟ್ಟೆಗೆ ಪೆಟ್ಟುಬೀಳುವುದಿಲ್ಲವೆ? ಸರಕಾರ ಅಕ್ಕಿ ಗಿರಣಿದಾರರನ್ನು ಎಷ್ಟರವಟ್ಟಿಗೆ ತಹಬಂದಿಯಲ್ಲಿಟ್ಟುಕೊಂಡಿದೆ? ಸರಕಾರದ ಎಂ. ಎಲ್. ಎ.ಗಳು, ಮಂತ್ರಿಗಳು ಧಾನ್ಯದ, ಬತ್ತದ ವ್ಯಾಪಾರಿಗಳ ನಿಕಟ ಬಾಂಧವ್ಯ ಇಟ್ಟುಕೊಂಡಿರುವುದರಿಂದ ರೈತರಿಗೆ, ಜನಸಾಮಾನ್ಯರಿಗೆ ಈ ಅಪರಿಹಾರ್ಯ ತೊಂದರೆಗಳಾಗುತ್ತಿರುವುದು ನಿಜವಾಗಿದೆ.

ನೀತಿಯಲ್ಲ ಅನೀತಿ

ಸರಕಾರ ಕೈಗೊಂಡಿರುವ ಲೆವಿ ನೀತಿ ನೀತಿಯಲ್ಲ ಅನೀತಿ. ಬೆಳೆಸುವವನಿಗೆ ಪ್ರೋತ್ಸಾಹಕೊಡದೆ, ಉಣ್ಣುವವನಿಗೆ ಬೆಲೆ ಕಡಿಮೆಗೆ ಅಕ್ಕಿ ಸಿಗದಂತೇ ಮಾಡುವುದು ಯಾವ ಸರಕಾರದ ನೀತಿಯೂ ಅಲ್ಲ. ಶಿವಮೊಗ್ಗೆಯ ರೈತರು ಈಗಾಗಲೇ ಸರಕಾರದ ಲೆವಿ ಧೋರಣೆ, ಬೆಲೆಗಳನ್ನು ಪ್ರಶ್ನಿಸಿ ಚಳುವಳಿ ನಡೆಸುತ್ತಿದ್ದಾರೆ. ಇನ್ನೊಂದೆಡೆಯಿಂದ ಕಬ್ಬಿನ ಬೆಳೆಗಾರರು ಬೆಲೆಯ ಬಗ್ಗೆ ಖಿನ್ನರಾಗಿದ್ದಾರೆ. ದೇಶದಲ್ಲಿ ಈ ಮೊದಲೇ ಈರುಳ್ಳಿ, ತಂಬಾಕು ಮೊದಲಾದ ಬೆಳೆಗಾರರು ಬೆಲೆಗಾಗಿ ಕಾದಾಡಿ ಸಾಕಷ್ಟರ ಕಷ್ಟನಷ್ಟ ಹೊಂದಿದ್ದಾರೆ. ಇವುಗಳನ್ನೆಲ್ಲಾ ಬೆಲೆತೆತ್ತು ಕೊಂಡುಕೊಳ್ಳುವ ಶ್ರೀಸಾಮಾನ್ಯ ಇಂದೋ ನಾಳೆಯೋ ಎದ್ದು ನಿಂತು ಹೋರಾಡದೆ ವಿಧಿಯಿಲ್ಲ. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಸರಕಾರ ಇಂದಿನ ಲೆವಿ ಧೋರಣೆಯ ಬಗೆಗೆ, ಜೀವನಾವಶ್ಯಕ ವಸ್ತುಗಳ ಕುರಿತು ಮುಖ್ಯವಾಗಿ ಅಕ್ಕಿ, ಗೋಧಿ ಮೊದಲಾದವುಗಳ ಬೆಲೆ, ವಿತರಣೆಗಳಿಗೆ ಮನಸುಮಾಡದೇ ಇರುವುದಾದರೆ ಜನತೆ ಅದರಲ್ಲಿಯೂ ರೈತರು, ಮತದಾರರು, ಜನಸಾಮಾನ್ಯರು ಈಗ ಯೋಚಿಸಬೇಕಾದ ಕಾಲ ಸನ್ನಿಹಿತವಾಗಿದೆ. ಮುಖ್ಯಮಂತ್ರಿ ಗುಂಡೂರಾಯರ ಸರಕಾರ ಆಡಿದ್ದನ್ನು ಮಾಡುವ ಹಾಗೂ ಸತ್ಯವನ್ನಾಡುವ ಅಭ್ಯಾಸ ಎಂದೋ ತೊರೆದಿದೆ. ಈ ಸರಕಾರ ಜನತೆಯ ಆಶೋತ್ತರಗಳನ್ನು ಮಣ್ಣುಮಾಡಿದೆ. ಅದರಿಂದ ಏನನ್ನೂ ಬಯಸುವುದು ಎಂದೂ ಸಾಧ್ಯವಿಲ್ಲ. ●

ಸಿ. ಪಿ. ಐ. (ಎಂ) ಕಾರ್ಯಕರ್ತರ ಭೀಕರ ಕೊಲೆ

ಆಂಧ್ರದ ವಿಜಯವಾಡಾದ ಸಮೀಪದಲ್ಲಿ ಅಕ್ಟೋಬರ್ 20, 21ರಂದು ಇಬ್ಬರು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತರನ್ನು ಸಿ.ಪಿ.ಐ.ಗೆ ಸೇರಿದ ಗೂಂಡಾಗಳು ಅಮಾನುಷ ಕೊಲೆಗೈಯ್ದಿದ್ದಾರೆ.

ದೇಶದಾದ್ಯಂತ ಸಿ. ಪಿ. ಐ.(ಎಂ) ಮತ್ತು ಸಿ.ಪಿ.ಐ.ಗಳು ಜಂಟಿಯಾಗಿ ಜನತೆಯನ್ನು ಬಾಧಿಸುತ್ತಿರುವ ಸಮಸ್ಯೆಗಳನ್ನು ಎದುರಿಸಲು ಕಾರ್ಯಕ್ರಮ ರೂಪಿಸಿಕೊಳ್ಳುತ್ತಿರುವ ಸಮಯದಲ್ಲಿ ಈ ಘಟನೆ ಕಮ್ಯೂನಿಸ್ಟ್ ಚಳುವಳಿಯ ಹಿತೈಷಿಗಳಿಗೆ ಆಘಾತವನ್ನುಂಟು ಮಾಡಿದೆ. ಇತ್ತೀಚೆಗೆ ತಾನೇ ವಿಜಯವಾಡಾ ನಗರಸಭೆಯ ಮತ್ತು ಮಂಗಳಗಿರಿಯ ಮುನಿಸಿಪಲ್ ಕೌನ್ಸಿಲ್ ಚುನಾವಣೆಗಳನ್ನು ಸಿ. ಪಿ. ಐ.(ಎಂ) ಮತ್ತು ಸಿ.ಪಿ.ಐ. ಜಂಟಿಯಾಗಿ ಎದುರಿಸಿದ್ದವು.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಮಂಗಳಗಿರಿ ತಾಲೂಕು ಕಮಿಟಿಯ ಸದಸ್ಯರಾದ ಕಾಂ. ಅಮರರೆಡ್ಡಿಯವರು ಅಕ್ಟೋಬರ್ 20 ರಂದು ಸಿ. ಪಿ. ಐ. ಗೂಂಡಾಗಳಿಂದ ಹಾಡೇಹಗಲು ಕೊಲೆಗೀಡಾಗಿದ್ದಾರೆ. ಮಾರಕಾಯುಧಗಳಿಂದ ಹಲ್ಲೆಗೀಡಾದ ಕಾಂ. ಅಮರರೆಡ್ಡಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

45 ವರ್ಷ ವಯಸ್ಸಿನ ಕಾಂ. ಅಮರರೆಡ್ಡಿಯವರು ತಮ್ಮ ಸ್ವಗ್ರಾಮವಾದ ತಾಡೇಪಲ್ಲಿಯ ಗ್ರಾಮ ಪಂಚಾಯಿತಿಯ ಸ್ಥಾನಕ್ಕೆ ಇತ್ತೀಚೆಗೆ ಸ್ಪರ್ಧಿಸಿದ್ದರು. ಕಾಂಗ್ರೆಯೊಟ್ಟಿಗೆ ಸಿ.ಪಿ.ಐ. ನವರೂ ಸೇರಿ ಕಾಂ. ಅಮರರೆಡ್ಡಿಯವರನ್ನು ಚುನಾವಣೆಯಲ್ಲಿ ಎದುರಿಸಿದ್ದರು. ತಾಡೇಪಲ್ಲಿ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಕಾಂ. ಅಮರರೆಡ್ಡಿಯವರು ಜನಪ್ರಿಯರಾಗಿದ್ದರು. ಆ ಭಾಗದ ಸಮಾಜಘಾತಕ ಶಕ್ತಿಗಳಿಗೆ ಸಿಂಹಸ್ವಪ್ನವಾಗಿದ್ದರು. ಕಳೆದ ಆಗಸ್ಟ್‌ನಲ್ಲಿ ತಾನೇ ತಮ್ಮ ಗ್ರಾಮದ ಕೃಷಿಕೂಲಿಕಾರರನ್ನು ಸಂಘಟಿಸಿ ಹೋರಾಟಕ್ಕಿಳಿಸಿದ್ದರು. ಸ್ಥಳೀಯ ಸಿ.ಪಿ.ಐ. ಘಟಕವು ಕಾಂ. ಅಮರರೆಡ್ಡಿಯವರು ಸಂಘಟಿಸಿದ ಹೋರಾಟಕ್ಕೆ ವಿರೋಧವಾಗಿ ಕೆಲಸಮಾಡಿತ್ತು.

ಸಿ. ಪಿ. ಐ. ನವರ ಗೂಂಡಾಗಿರಿಯಿಂದ ಕೊಲೆಗೀಡಾದ ಕಾಂ. ಅಮರರೆಡ್ಡಿಯವರಿಗೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನಾಯಕರಾದ ಕಾಂ. ಸುಂದರಯ್ಯ, ಮೋಟೂರು ಹನುಮಂತರಾವ್, ಎಲ್. ಬಿ. ಗಂಗಾಧರರಾವ್ ತಮ್ಮ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ. ಅಕ್ಟೋಬರ್ 21 ರಂದು ಕಾಂ. ಅಮರರೆಡ್ಡಿಯವರ ಸ್ವಗ್ರಾಮವಾದ ತಾಡೇಪಲ್ಲಿಯಲ್ಲಿ ನಡೆದ ಅಂತ್ಯಸಂಸ್ಕಾರದ ಸಂದರ್ಭದಲ್ಲಿ ಸುಮಾರು 6000 ಕ್ಕೂ ಮಿಕ್ಕಿ ಜನರು ಭಾಗವಹಿಸಿ ಅಗಲಿದ ತಮ್ಮ ನೆಚ್ಚಿನ ನಾಯಕನಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

ಸಿ. ಪಿ. ಐ. ನ ಗೂಂಡಾಗಳಿಂದ ಇನ್ನೊಂದು ಕೊಲೆ ನಡೆದದ್ದು ಕೃಷ್ಣಾ ಜಿಲ್ಲೆಯ ತಾಲೂಕು ಸ್ಥಳವಾದ ನಂದಿಗ್ರಾಮದಲ್ಲಿ. ರಿಕ್ಷಾ ಚಾಲಕರ ಯೂನಿಯನ್‌ನ ಅಧ್ಯಕ್ಷ ಹಾಗೂ ಡಿ.ವೈ.ಎಫ್.ಐ. ನ ಸಕ್ರಿಯ ಕಾರ್ಯಕರ್ತ ಕಾಂ. ಪಿ.ಪ್ರಭಾಕರರು ಅಕ್ಟೋಬರ್ 21 ರಂದು ನಡುಬೀದಿಯಲ್ಲೇ ಗೂಂಡಾದಾಳಿಯಿಂದ ಸಾವನ್ನಪ್ಪಿದ್ದಾರೆ. ಮಾರಕಾಯುಧಗಳಿಂದ ಸಜ್ಜಿತರಾದ ಸಿ. ಪಿ. ಐ.ನ ಗೂಂಡಾಗಳು ಕಾಂ. ಪ್ರಭಾಕರರನ್ನು ಕೊಚ್ಚಿಹಾಕಿದ್ದಾರೆ. ಈ ಹಲ್ಲೆಯಲ್ಲಿ ಸಿ. ಪಿ. ಐ.ನ ವಿದ್ಯಾರ್ಥಿ ಮತ್ತು ಯುವಜನ ಸಂಘಟನೆಯ ಕಾರ್ಯಕರ್ತರು ಭಾಗಿಯಾಗಿದ್ದರು.

ಕೊಲೆನಡೆದ ನಂತರ ಆಗಮಿಸಿದ ಪೋಲೀಸರು ಸ್ಥಳೀಯ ಸಿ. ಪಿ. ಐ. ಆಫೀಸಿನಿಂದ ರಕ್ತಸಿಕ್ತ ಆಯುಧಗಳನ್ನು ವಶಪಡಿಸಿಕೊಂಡಿದ್ದಾರೆ.

○

ಜೆ. ಎನ್. ಯು. (JNU)ನಲ್ಲಿ ಎಸ್. ಎಫ್. ಐ. ಮತ್ತು ಎ. ಐ. ಎಸ್. ಎಫ್. ಜಯಭೇರಿ

ದೆಹಲಿಯ ಜವಾಹರಲಾಲ್ ಯೂನಿವರ್ಸಿಟಿಯ ವಿದ್ಯಾರ್ಥಿ ಕೌನ್ಸಿಲ್‌ನ ಚುನಾವಣೆಯಲ್ಲಿ ಎಸ್. ಎಫ್. ಐ. ಮತ್ತು ಎ. ಐ. ಎಸ್. ಎಫ್. ಕೂಟ ಜಯಭೇರಿ ಗಳಿಸಿದೆ. ಒಟ್ಟು 21 ಸ್ಥಾನಗಳಲ್ಲಿ 13 ಸ್ಥಾನಗಳನ್ನು ಈ ಕೂಟ ಗಳಿಸಿದೆ.

ವಿದ್ಯಾರ್ಥಿ ಕೌನ್ಸಿಲ್‌ನ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಎಸ್. ಎಫ್. ಐ.ನ ಕಾಂ. ಅಮರಜೀತ್‌ಸಿಂಗ್ ಸಿರೋಹಿಯವರು 250ಕ್ಕೂ ಹೆಚ್ಚು ಮತಗಳಿಂದ ವಿಜಯಿಯಾಗಿದ್ದಾರೆ. (ಇವರ ಫಲಿತಾಂಶವನ್ನು ಅಧಿಕೃತವಾಗಿ ಇನ್ನೂ ಪ್ರಕಟಿಸಿಲ್ಲ. ಏಕೆಂದರೆ ಕೋರ್ಟಿನಿಂದ ಕೆಲವರು ತಡೆಯಾಜ್ಞೆ ತಂದಿದ್ದಾರೆ.)

ಪ್ರಧಾನಕಾರ್ಯದರ್ಶಿಯಾಗಿ ಎ. ಐ. ಎಸ್. ಎಫ್.ನ ಕಾಂ. ಅಜಯ್ ಪಾಟ್ನಾಯಕ್ 100ಕ್ಕೂ ಹೆಚ್ಚು ಮತಗಳಿಂದ ಆಯ್ಕೆಯಾಗಿದ್ದಾರೆ.

ಸಹಕಾರ್ಯದರ್ಶಿಯಾಗಿ ಎಸ್. ಎಫ್. ಐ. ನ ಕಾಂ. ಸೋನಿಯಾ ಗುಪ್ತಾ 300ಕ್ಕೂ ಅಧಿಕ ಮತಗಳಿಂದ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಎಸ್. ಎಫ್. ಐ.ನ ಕಾಂ. ಜಗದೀಶ್ವರ ಕೇವಲ 28 ಮತಗಳಿಂದ ಪರಾಜಿತರಾಗಿದ್ದಾರೆ.

ಈ ವಿಶ್ವವಿದ್ಯಾಲಯದಲ್ಲಿ ಎಡ ರಾಜಕೀಯ ಸಿದ್ಧಾಂತವನ್ನು ಒಪ್ಪುವ ವಿದ್ಯಾರ್ಥಿ ಸಂಘಟನೆಗಳ ಪ್ರಭಾವ ವಿದ್ಯಾರ್ಥಿ ಸಮುದಾಯದ ಮೇಲೆ ಅಪಾರವಾಗಿದೆ. ಬೂರ್ಜ್ವಾ ಬಲ ಪಕ್ಷಗಳಾದ ಕಾಂಗ್ರೆ, ಜನತಾ ಮುಂತಾದ ಪಕ್ಷಗಳ ಸಿದ್ಧಾಂತ ಒಪ್ಪುವ ವಿದ್ಯಾರ್ಥಿ ಸಂಘಟನೆಗಳೂ ಅಸ್ತಿತ್ವದಲ್ಲಿದೆ.

ಈ ಬಾರಿಯ ಚುನಾವಣೆ ತುಂಬ ಬಿರುಸಾಗಿತ್ತು. ಕಳೆದ ವರ್ಷ ಎಸ್. ಎಫ್. ಐ. ಮತ್ತು ಎ. ಐ. ಎಸ್. ಎಫ್. ಮೈತ್ರಿರಂಗವಿರಲಿಲ್ಲ. ಎಸ್. ಎಫ್. ಐ. ಏಕಾಂಗಿಯಾಗಿ ಚುನಾವಣೆಯನ್ನು ಎದುರಿಸಿ ಪ್ರಮುಖ ಸ್ಥಾನಗಳನ್ನು ಗಳಿಸಿಕೊಂಡಿತ್ತು.

ಎಸ್. ಎಫ್. ಐ.ನ ವಿರುದ್ಧ ಇತರ ವಿದ್ಯಾರ್ಥಿ ಸಂಘಟನೆಗಳು ಕುಹಕ ಪ್ರಚಾರ ನಡೆಸಿದ್ದರೂ ಎಸ್. ಎಫ್. ಐ. ಮತ್ತು ಎ. ಐ. ಎಸ್. ಎಫ್. ಮೈತ್ರಿರಂಗ ಅದ್ಭುತ ಜಯಗಳಿಸಿದ್ದು ಗಮನಾರ್ಹ.

●

ಎಸ್. ಎಫ್. ಐ. ಚಟುವಟಿಕೆಗಳು

ಮಂಗಳೂರು

ಎಸ್.ಎಫ್.ಐ. ಮತ್ತು ಮಹಿಳಾ ಪಾಲಿಟೆಕ್ನಿಕ್ ಜಂಟಿ ಘಟಕದ ಉದ್ಘಾಟನಾ ಸಮಾರಂಭವು 24-10-81 ರಂದು ಮಂಗಳೂರಿನ ಡಾನ್‌ಬಾಸ್ಕೋ ಮೀಟಿಂಗ್ ಹಾಲ್‌ನಲ್ಲಿ ನಡೆಯಿತು. ಉದ್ಘಾಟನೆಯನ್ನು ಕರ್ನಾಟಕ ಬ್ಯಾಂಕಿನ ರೀಜನಲ್ ಡೆವಲಪ್‌ಮೆಂಟ್ ಮ್ಯಾನೇಜರ್ ಶ್ರೀ ಎಂ. ಕೇಶವಯ್ಯ ನೆರವೇರಿಸಿದರು. ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ "ಸಮುದಾಯ"ದ ಮಂಗಳೂರು ಘಟಕದ ಅಧ್ಯಕ್ಷ ಶ್ರೀ ಬಿ. ಮಾಧವರು ಆಗಮಿಸಿದ್ದರು. ಅಧ್ಯಕ್ಷತೆಯನ್ನು ಎಸ್. ಎಫ್. ಐ.ನ ದ. ಕ. ಜಿಲ್ಲಾ ಸಮಿತಿ ಅಧ್ಯಕ್ಷ ರಾಮಾನುಜಂ ವಹಿಸಿದ್ದರು.

1981–82ನೇ ಸಾಲಿಗೆ ಜಂಟಿ ಘಟಕದ ಅಧ್ಯಕ್ಷರಾಗಿ ಎಂ. ವಿಠಲ, ಉಪಾಧ್ಯಕ್ಷರಾಗಿ ಎಂ. ಶಂಕರ್ ಮತ್ತು ಪಿ. ಯು. ಮಹೇಶ್ವರಿ, ಕಾರ್ಯದರ್ಶಿಯಾಗಿ ಕೃಷ್ಣಪ್ಪಪೂಜಾರಿ, ಜೊತೆ ಕಾರ್ಯದರ್ಶಿಯಾಗಿ ಎ. ಅನ್ನಪೂರ್ಣ ಮತ್ತು ಕೋಶಾಧಿಕಾರಿಯಾಗಿ ಎನ್. ಶಂಕರ ಇವರುಗಳು ಆಯ್ಕೆಯಾದರು.

ಮಂಜೇಶ್ವರ

ಎಸ್. ಎಫ್. ಐ.ನ ಅಖಿಲಭಾರತ ಸಮಾವೇಶದ ಪೂರ್ವಭಾವಿಯಾಗಿ ಮಂಜೇಶ್ವರದಲ್ಲಿ ಎಸ್. ಎಫ್. ಐ. ಏರಿಯಾ ಸಮ್ಮೇಳನವು 24-10-81 ರಂದು ನಡೆಯಿತು. ಮಂಜೇಶ್ವರ ಪ್ರದೇಶದ 10 ಹೈಸ್ಕೂಲ್ ಮತ್ತು ಸ್ಥಳೀಯ ಗೋವಿಂದ ಪೈ ಸ್ಮಾರಕ ಕಾಲೇಜಿನಿಂದ ಆಯ್ಕೆಮಾಡಲಾಗಿದ್ದ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಸಮ್ಮೇಳನದ ಅಧ್ಯಕ್ಷತೆಯನ್ನು ಇಬ್ರಾಹಿಂ ಪೈವಳಿಕೆ ಇವರು ವಹಿಸಿದ್ದರು.

ಸಮ್ಮೇಳನವನ್ನು ದ. ಕ. ಜಿಲ್ಲಾ ಎಸ್. ಎಫ್. ಐ. ಕಾರ್ಯದರ್ಶಿ ಕಾಂ. ಉಮೇಶ್ ಭಂಡಾರಿ ಉದ್ಘಾಟಿಸಿದರು. ಸಮ್ಮೇಳನದಲ್ಲಿ ಮಂಜೇಶ್ವರ ಪಂಚಾಯತ್ ಅಧ್ಯಕ್ಷ ಬಿ. ಎಂ. ರಾಮಯ್ಯಶೆಟ್ಟಿ, ಕಲ್ಲಿಕೋಟೆ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರೂ, ಕೇರಳ ರಾಜ್ಯ ಎಸ್. ಎಫ್. ಐ. ಸಮಿತಿಯ ಸದಸ್ಯರೂ ಆದ ಸಿ. ಎಚ್. ಕುಂಞಂಬು, ಸತೀಶ್‌ಚಂದ್ರನ್, ವಸಂತ ಮೊದಲಾದವರು ಮಾತನಾಡಿ ಶುಭವನ್ನು ಕೋರಿದರು.

ಕೊನೆಯಲ್ಲಿ ಮಂಜೇಶ್ವರ ಏರಿಯಾ ಸಮಿತಿಗೆ ಇಬ್ರಾಹಿಂ ಪೈವಳಿಕೆಯವರನ್ನು ಕಾರ್ಯದರ್ಶಿಯನ್ನಾಗಿ ಹಾಗೂ 10 ಜನ ಏರಿಯಾ ಸಮಿತಿ ಸದಸ್ಯರನ್ನು ಚುನಾಯಿಸಲಾಯಿತು.

ಮಂಗಳೂರು

31-10-81ರಂದು ಎಸ್. ಎಫ್. ಐ.ನ ಮಂಗಳೂರು ತಾಲ್ಲೂಕು ಸಮಿತಿಯ ವಿಸ್ತೃತ ಸಭೆ ಸೇರಿತ್ತು. ಈ ಸಭೆಯಲ್ಲಿ 81-82ರ ಶೈಕ್ಷಣಿಕ ವರ್ಷದ ಎಸ್. ಎಫ್. ಐ. ಚಟುವಟಿಕೆಗಳಿಗಾಗಿ ಹೊಸ ಸಮಿತಿಯನ್ನು ಆರಿಸಲಾಯಿತು.

ನೂತನ ಸಮಿತಿಗೆ ಅಧ್ಯಕ್ಷರಾಗಿ ನಿರಂಜನರಾವ್, ಕಾರ್ಯದರ್ಶಿಯಾಗಿ ಕೆ. ಎಸ್. ಪೂಜಾರ್, ಜೊತೆಕಾರ್ಯದರ್ಶಿಯಾಗಿ ಸುಮತಿ ಹಾಗೂ ಬಾಲಕೃಷ್ಣ ಇವರುಗಳು ಆಯ್ಕೆಯಾಗಿದ್ದಾರೆ.

ಮಹಾನ್ ಅಕ್ಟೋಬರ್ ಕ್ರಾಂತಿ

(2ನೇ ಪುಟದಿಂದ)

ಅಕ್ಟೋಬರ ಕ್ರಾಂತಿಯ ವಿಜಯದ ನಂತರದ ವರ್ಷಗಳಲ್ಲಿ ಸೋವಿಯತ್ ಒಕ್ಕೂಟದಲ್ಲಿ ಕಂಡುಬಂದ ಅದ್ಭುತ ಪ್ರಗತಿಯನ್ನು ನಾವಿಂದು ಕಣ್ಣಾರೆ ಕಾಣುತ್ತಿದ್ದೇವೆ. ಬಂಡವಾಳಶಾಹಿ ಪದ್ಧತಿಯ ಶೃಂಖಲೆಗಳಿಂದ ಬಿಡುಗಡೆಯಾದ ಒಂದು ಜನಾಂಗವು ಏನು ಕ್ರಿಯಾತ್ಮಕ ಪವಾಡಗಳನ್ನು ಸಾಧಿಸಬಲ್ಲದೆಂಬುದಕ್ಕೆ ಸೋವಿಯತ್ ಒಕ್ಕೂಟ ಉದಾಹರಣೆಯಾಗಿ ನಿಂತಿದೆ.

ಶತಮಾನಗಳು ಉರುಳಿದಂತೆ ಮಾನವ ಕುಲವು ಸಮಾಜವಾದದ ಹಾದಿಯಲ್ಲಿ ತುಂಬ ಪ್ರಗತಿ ಹೊಂದುತ್ತದೆ. ಬಂಡವಾಳಶಾಹಿಯ ತಾಂಡವವಾಡುವ, ಕೆಲವೇ ಬಂಡವಾಳಗಾರರು ದುಡಿಮೆಗಾರ ಜನರನ್ನು, ಇಡೀ ರಾಷ್ಟ್ರಗಳನ್ನು ಕೂಡ ಕೊಳ್ಳೆಹೊಡೆಯುವ, ಲಾಭಕ್ಕಾಗಿ ಯುದ್ಧಗಳನ್ನಾರಂಭಿಸುವ ಕಾಲವು ಪುರಾತನ ಇತಿಹಾಸವಾಗಿ ಹೋಗಿರುತ್ತದೆ. ಜನರು "ಬಂಡವಾಳಗಾರ," "ಭೂಒಡೆಯ", "ಯುದ್ಧ" ಈ ಪದಗಳ ಅರ್ಥವನ್ನೂ ಮರೆತುಬಿಟ್ಟಿರುತ್ತಾರೆ. ಆದರೆ ಮಾನವ ಕುಲವು 1917ರ ಅಕ್ಟೋಬರ ಕ್ರಾಂತಿಯ ದಿನವನ್ನು - ಜಗತ್ತಿನ ಇತಿಹಾಸದ ಸ್ಥಿತ್ಯಂತರ ಕ್ಷಣ- ಮರೆಯುವದಿಲ್ಲ. ಈ ದಿನದೊಂದಿಗೇ ಕ್ರಾಂತಿಯ ನಾಯಕ ಮತ್ತು ಸೋವಿಯೆತ್ ರಾಷ್ಟ್ರದ ಸಂಸ್ಥಾಪಕ ವ್ಲಾದಿಮೀರ್ ಲೆನಿನ್‌ರವರ ಹೆಸರು ನಿರಂತರವಾಗಿ ಪ್ರಜ್ವಲಿಸುತ್ತಿರುತ್ತದೆ.

ನಮ್ಮ ದೇಶದಲ್ಲಿ ಇಂದಿರಾ ಸರ್ವಾಧಿಕಾರಕ್ಕೆದುರಾಗಿ ಧೀರೋದಾತ್ತ ಹೋರಾಟಗಳನ್ನು ನಡೆಸಿರುವ ದುಡಿಯುವ ಜನತೆಗೆ ಅಕ್ಟೋಬರ ಕ್ರಾಂತಿಯು ಸ್ಫೂರ್ತಿಯನ್ನು ಒದಗಿಸಲಿ. ಭಾರತದ ಜನತೆ ಸಮಾಜವಾದಿ ವ್ಯವಸ್ಥೆಗೋಸ್ಕರ ಹೋರಾಡಲು ಸನ್ನದ್ಧರಾಗಲಿ ಎಂದು ಈ ಸಮಯದಲ್ಲಿ ಆಶಿಸೋಣ.

[ವಿವಿಧ ಮೂಲಗಳಿಂದ]

-ವಿ. ಪಿ. ಕೆ.

ರೈತಸಂಘದ ಸಭೆ

ದಿ. 28-10-81ರಂದು ಮಂಗಳೂರು ತಾಲ್ಲೂಕು ರೈತಸಂಘದ ಕಮಿಟಿಯ ಸಭೆಯು ಕಾಂ. ಬಿ. ಬಾಬು ಅವರ ಅಧ್ಯಕ್ಷತೆಯಲ್ಲಿ ಸೇರಿತು. ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಜೆ. ಕೃಷ್ಣಪ್ಪನವರು ಚಟುವಟಿಕೆಯ ವರದಿಯನ್ನಿತ್ತರು.

ಲ್ಯಾಂಡ್ ಟ್ರಿಬ್ಯೂನಲ್‌ನ ಭ್ರಷ್ಟಾಚಾರದ ವಿರುದ್ಧ ಹೋರಾಟ ಹೂಡಬೇಕೆಂಬ ದ.ಕ. ಜಿಲ್ಲಾ ರೈತಸಂಘದ ತೀರ್ಮಾನದ ಪ್ರಕಾರ ಕಾರ್ಯಕ್ರಮ ರೂಪಿಸಲು ಸಭೆ ತೀರ್ಮಾನಕ್ಕೆಗೊಂಡಿತು. ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಜನಾರ್ಧನ ನಾಯಕರು ಸಭೆಯಲ್ಲಿ ಪಾಲ್ಗೊಂಡಿದ್ದರು.

ದಾಂಡೇಲಿಯಲ್ಲಿ ನಡೆದ ಪೋಲೀಸ್ ದೌರ್ಜನ್ಯವನ್ನು ಖಂಡಿಸಿ

ರಾಜ್ಯದ ನಾನಾಕಡೆ ಪ್ರತಿಭಟನೆ

ಉತ್ತರಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ತಮ್ಮ ನ್ಯಾಯವಾದ ಬೇಳಿಕೆಗಳಿಗೋಸ್ಕರ ಹೋರಾಡುತ್ತಿದ್ದ ಕಾರ್ಮಿಕರ ಮೇಲೆ, ಕಾರ್ಮಿಕ ಮುಖಂಡರಾದ - ಕಾಂ. ಆರ್. ಜಿ. ಸ್ಥಳೇಕರ, ಖ್ಯಾತ ನ್ಯಾಯವಾದಿ ಕಾಂ. ಧಾರೇಶ್ವರ ಮುಂತಾದವರ ಮೇಲೆ ಪೋಲೀಸರು ಅಮಾನುಷ ಹಲ್ಲೆ ನಡೆಸಿದ್ದನ್ನು ರಾಜ್ಯದ ನಾನಾ ಕಡೆ ಪ್ರತಿಭಟಿಸಲಾಗಿದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿ ಮತ್ತು ಸಿ.ಐ.ಟಿ.ಯು. ರಾಜ್ಯಸಮಿತಿಗಳು 30-10-81ರಂದು "ದಾಂಡೇಲಿ-ದಿನಾಚರಣೆ" ನಡೆಸಲು ಕರೆಕೊಟ್ಟಿದ್ದವು. ನಮಗೆ ಬಂದಿರುವ ವಿವರಗಳು ಇಂತಿವೆ.

ಬೆಂಗಳೂರು

30-10-81ರಂದು ನಗರದ ಅಲಸೂರಿನಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಆಶ್ರಯದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಜಾನ್‌ವಿನ್ಸೆಂಟ್ ವಹಿಸಿದ್ದರು.

ಸಭೆಯನ್ನುದ್ದೇಶಿಸಿ ರಾಜ್ಯ ಸಿ.ಐ.ಟಿ.ಯು. ಅಧ್ಯಕ್ಷರೂ, ರಾಜ್ಯ ಸೆಕ್ರೆಟ್ಯಾರಿಯೆಟ್ ಸದಸ್ಯರೂ ಆದ ಕಾಂ. ಸೂರ್ಯನಾರಾಯಣರಾವ್, ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿಯ ಸೆಕ್ರೆಟ್ಯಾರಿಯೆಟ್ ಸದಸ್ಯರಾದ ಕಾಂ. ಪಿ. ಜಗನ್ನಾಥ ಮತ್ತು ಪಿ. ಕೆ. ಸುಬ್ರಹ್ಮಣಿಯಂವರು ಮಾತನಾಡಿ ದಾಂಡೇಲಿಯಲ್ಲಿ ನಡೆದ ಪೋಲೀಸ್ ದೌರ್ಜನ್ಯವನ್ನು ಖಂಡಿಸಿದರು. ಹಾಗೂ ಈ ಘಟನೆಯ ನ್ಯಾಯಾಂಗ ತನಿಖೆಯಾಗಬೇಕೆಂದು ಒತ್ತಾಯಿಸಿದರು.

ಮಂಗಳೂರು

30-10-81ರಂದು ಮಂಗಳೂರಿನ ನೆಹರೂ ಮೈದಾನದಲ್ಲಿ ಸಿ.ಐ.ಟಿ.ಯು. ನೇತೃತ್ವದಲ್ಲಿ ದಾಂಡೇಲಿಯ ಪೋಲೀಸ್ ದಬ್ಬಾಳಿಕೆಯನ್ನು ಖಂಡಿಸಿ ಬಹಿರಂಗ ಸಭೆ ನಡೆಯಿತು. ಸಭೆಗೆ ಮುನ್ನ ಬೋಳಾರ, ತೊಕ್ಕೊಟ್ಟು, ಕಂಕನಾಡಿ, ಅಳಪೆ ಮೊದಲಾದ ಪ್ರದೇಶಗಳಿಂದ ಕಾರ್ಮಿಕರು ಮೆರವಣಿಗೆಯಲ್ಲಿ ಆಗಮಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಸಿ.ಐ.ಟಿ.ಯು. ಕಾರ್ಯದರ್ಶಿ ಕಾಂ. ಕೆ. ಮೂಸಬ್ಬ ವಹಿಸಿದ್ದರು.

ಸಭೆಯನ್ನುದ್ದೇಶಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ. ಕೆ. ಆರ್. ಶ್ರೀಯಾನ್ ಮಾತನಾಡಿ ಪೋಲೀಸ್ ದೌರ್ಜನ್ಯವನ್ನು ಉಗ್ರವಾಗಿ ಖಂಡಿಸಿದರು.

ಆರಂಭದಲ್ಲಿ ಕಾಂ. ಕಮಲಾಕ್ಷ ಬಂಗೇರ ಸ್ವಾಗತಿಸಿದರು. ಕೊನೆಯಲ್ಲಿ ಕಾಂ. ಬಾಲಕೃಷ್ಣಶೆಟ್ಟರು ಧನ್ಯವಾದವಿತ್ತರು.

ಬಿಜಾಪುರ

30-10-81ರಂದು ಬಿಜಾಪುರದಲ್ಲಿ ಕಾರ್ಮಿಕ ಸಮನ್ವಯ ಸಮಿತಿ, ವಿದ್ಯಾರ್ಥಿ ಸಂಘಗಳು, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಸಿ. ಪಿ. ಐ. ಪಕ್ಷಗಳು ಸಭೆ ಸೇರಿ ದಾಂಡೇಲಿಯ ಕಾರ್ಮಿಕರ ಮೇಲೆ ಪೋಲೀಸರು ನಡೆಸಿದ ಅತ್ಯಾಚಾರವನ್ನು ಖಂಡಿಸಲಾಯಿತು. ನ್ಯಾಯಾಂಗ ವಿಚಾರಣೆಗೆ ಒತ್ತಾಯಿಸಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಅಪ್ಪಾಸಾಹೇಬ ಯರ್ನಾಳರು ವಹಿಸಿದ್ದರು. ಸಭೆಯನ್ನು ಉದ್ದೇಶಿಸಿ ಕಾಂ. ಎನ್. ಕೆ. ಉಪಾಧ್ಯಾಯ, ರವೀಂದ್ರ ದೇಸಾಯಿ, ಪ್ರಕಾಶ್ ಹಿಟ್ಟನಳ್ಳಿ, ಆರ್. ಐ. ಮಠ, ಕಟಗಿ ಮೊದಲಾದವರು ಮಾತನಾಡಿ ಪೋಲೀಸ್ ದಬ್ಬಾಳಿಕೆಯನ್ನು ಖಂಡಿಸಿದರು.

ಹರಿಹರ

30-10-81ರಂದು ಹರಿಹರದಲ್ಲಿ ದಾಂಡೇಲಿಯ ಪೋಲೀಸ್ ದೌರ್ಜನ್ಯವನ್ನು ಖಂಡಿಸಿ ಬೃಹತ್ ಮೆರವಣಿಗೆ ಸಭೆ ನಡೆದವು. ಕಿರ್ಲೋಸ್ಕರ್ ಕಾರ್ಮಿಕರು, ಬೀಡಿಕಾರ್ಮಿಕರು ಈ ಮೆರವಣಿಗೆ, ಸಭೆಯಲ್ಲಿ ಪಾಲ್ಗೊಂಡಿದ್ದರು.

"ದಾಂಡೇಲಿಯಲ್ಲಿನಡೆದಪೋಲೀಸ್ ಗೋಲೀಬಾರ್‌ನ ಕುರಿತು ನ್ಯಾಯಾಂಗ ತನಿಖೆಯಾಗಬೇಕು", "ದೌರ್ಜನ್ಯವೆಸಗಿದ ಪೋಲೀಸ್ ಅಧಿಕಾರಿಗಳನ್ನು ಕೂಡಲೇ ವಜಾಮಾಡಬೇಕು" ಮುಂತಾದ ಬೇಡಿಕೆಗಳನ್ನು ಮುಂದಿಟ್ಟು ಹರಿಹರ ಪೋಲೀಸ್ ಸ್ಟೇಷನ್ ಎದುರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾಂ. ಭೀಮಪ್ಪ ರೆಡ್ಡಿ, ಎಂ. ಎಂ. ರಾಮಪ್ಪ, ಭೈರಮಗೌಡರ ಮತ್ತು ಕಾರ್ಮಿಕ ಮುಖಂಡರಾದ ಕಾಂ. ಆರ್. ಬಿ. ಅಂಗಡಿ, ಬಸವಣ್ಣಪ್ಪ, ಅಬ್ದುಲ್‌ಜಬ್ಬಾರ, ಮಾಧವ ಮತ್ತು ರಾಮಚಂದ್ರ ಇವರುಗಳು ಒಂದು ದಿನ (30-10-81 ರಂದು) ಉಪವಾಸ ಮುಷ್ಕರ ನಡೆಸಿದರು.

ಸುಮಾರು 5000 ಕಾರ್ಮಿಕರು ಪಾಲ್ಗೊಂಡಿದ್ದ ಮೆರವಣಿಗೆ ಬೇಡಿಕೆಗಳನ್ನು ಮುಂದಿಟ್ಟು ಉಪವಾಸ ಮುಷ್ಕರ ನಡೆಸುತ್ತಿದ್ದ ಕಾರ್ಯಕರ್ತರನ್ನು ತಲುಪಿತು. ಅಲ್ಲಿಯೇ ಬಹಿರಂಗ ಸಭೆ ನಡೆಯಿತು. ಸಭೆಯನ್ನುದ್ದೇಶಿಸಿ ಕಾಂ. ಎನ್. ಜಿ. ಪಠಾಣ, ಡಿ. ಜಿ. ಜೋಷಿ, ಸದಾಶಿವಪ್ಪ ಮೊದಲಾದವರು ಮಾತನಾಡಿದರು.

ಕೊನೆಯಲ್ಲಿ ದಾಂಡೇಲಿಯಲ್ಲಿ ಗೋಲೀಬಾರ್‌ಗೆ ಕಾರಣನಾದ ಕ್ರೂರ ವಾರದ ಎಸ್. ಪಿ. ಪಾವಟೆಯ ಪ್ರತಿಕೃತಿ ದಹನಮಾಡಿ ಕಾರ್ಮಿಕರು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಸುಳ್ಯ

ದ. ಕ. ಜಿಲ್ಲೆಯ ಸುಳ್ಯದಲ್ಲಿ 30-10-81ರಂದು ದಾಂಡೇಲಿಯಲ್ಲಿ ನಡೆದ ಪೋಲೀಸ್ ದಬ್ಬಾಳಿಕೆಯನ್ನು ಪ್ರತಿಭಟಿಸಿ ಪಂಜಿನ ಮೆರವಣಿಗೆ ನಡೆಸಲಾಯಿತು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ನಡೆದ ಈ ಮೆರವಣಿಗೆಯಲ್ಲಿ ಪಕ್ಷದ ಕಾರ್ಯಕರ್ತರು, ರೈತರು-ಕಾರ್ಮಿಕರು ಪಾಲ್ಗೊಂಡಿದ್ದರು. ದಾಂಡೇಲಿ ಪೋಲೀಸ್ ದಬ್ಬಾಳಿಕೆಯ ನ್ಯಾಯಾಂಗ ತನಿಖೆಯಾಗಬೇಕೆಂದು, ದೌರ್ಜನ್ಯವೆಸಗಿದ ಪೋಲೀಸ್ ಅಧಿಕಾರಿಗಳನ್ನು ವಜಾಮಾಡಬೇಕೆಂಬ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಈ ಮೆರವಣಿಗೆಯ ನೇತೃತ್ವವನ್ನು ಕಾಂ. ಪಿ. ಕೆ. ಮೂಸ, ಕೆ. ಪೂವಪ್ಪಗೌಡ ಮತ್ತು ಕಾಂ. ಕಾಂತಮಂತ್ರಿ ವಹಿಸಿದ್ದರು.

ಗುತ್ತಿಗಾರು

ಸುಳ್ಯ ತಾಲ್ಲೂಕಿನ ಗುತ್ತಿಗಾರಿನಲ್ಲಿ ರೈತರು-ಕೃಷಿಕೂಲಿಕಾರರು ದಾಂಡೇಲಿಯ ಕಾರ್ಮಿಕರ ಮೇಲಾದ ದಾಳಿಯನ್ನು ಖಂಡಿಸಿ ಪಂಜಿನ ಮೆರವಣಿಗೆ ನಡೆಸಿದರು. ಈ ಪ್ರತಿಭಟನಾ ಮೆರವಣಿಗೆಯ ನೇತೃತ್ವವನ್ನು ಕಾಂ. ಎಂ. ಬಾಲಕೃಷ್ಣಗೌಡರು ವಹಿಸಿದ್ದರು.

ಕುಂದಾಪುರ

30-10-81ರಂದು ಪಕ್ಷದ ಮತ್ತು ಸಿ.ಐ.ಟಿ.ಯು. ಕರೆಯ ಮೇರೆಗೆ ಕುಂದಾಪುರದಲ್ಲಿ ಪ್ರತಿಭಟನಾಸಭೆ ನಡೆಸಲಾಯಿತು. ಸಿ.ಐ.ಟಿ.ಯು.ಗೆ ಸೇರಿದ ಎಲ್ಲ ಕಾರ್ಮಿಕ ಸಂಘಗಳ ನೇತೃತ್ವದಲ್ಲಿ ಮೆರವಣಿಗೆಯನ್ನು ಹೊರಡಿಸಿ ದಾಂಡೇಲಿಯಲ್ಲಿ ಪೋಲೀಸರ ರಾಕ್ಷಸೀ ಕೃತ್ಯದ ಬಗ್ಗೆ ನ್ಯಾಯಾಂಗ ತನಿಖೆಗೆ ಒತ್ತಾಯಿಸಿ ಮನವಿಯೊಂದನ್ನು ಮುಖ್ಯಮಂತ್ರಿಗೆ ಕಳಿಸುವಂತೆ ತಿಳಿಸಿ ತಹಸೀಲ್ದಾರರಿಗೆ ಕೊಡಲಾಯಿತು.

ನಂತರ ಶಾಸ್ತ್ರಿ ಪಾರ್ಕಿನ ಬಳಿ ಸಾರ್ವಜನಿಕ ಸಭೆ ನಡೆಯಿತು. ಕಾಂ. ಸು. ನಾರಾಯಣ್ ಅಧ್ಯಕ್ಷತೆಯನ್ನು ವಹಿಸಿ ದಾಂಡೇಲಿಯಲ್ಲಿ ಕಾರ್ಮಿಕರ ಮೇಲೆ ಅಮಾನುಷ ದಬ್ಬಾಳಿಕೆ ನಡೆಸಿದ್ದರ ... ಕಾರ್ಮಿಕ ಮುಖಂಡ ಕಾಂ. ... ಕೆ. ಶಂಕರ ಸಭೆಯನ್ನುದ್ದೇಶಿಸಿ ಮಾತನಾಡಿ ... ಉಗ್ರವಾಗಿ ಖಂಡಿಸಿ ದಾಂಡೇಲಿಯ ಘಟನೆಯ ... ನ್ಯಾಯಾಂಗ ತನಿಖೆಗೆ ಒತ್ತಾಯಿಸಿ ... ದಂಡನೆ ... ನಿರಪರಾಧಿ ಕಾರ್ಮಿಕರ ಮೇಲೆ ದೌರ್ಜನ್ಯವೆಸಗಿದ ಪೋಲೀಸ್ ಅಧಿಕಾರಿಗಳನ್ನು ಈ ಕೂಡಲೇ ವಜಾಮಾಡ...

ಬೀದರ

30-10-81 ರಂದು ಮಾರ್ಕ್ಸ್‌ವಾದಿ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಪಕ್ಷದ ಬೀದರ ಜಿಲ್ಲಾ ಸಮಿತಿ ನಿಯೋಗವೊಂದು ಜಿಲ್ಲಾಧಿಕಾರಿಗಳಲ್ಲಿ ... ಯಿಸಿದೆ.

ಕೃಷಿ ಕಾರ್ಮಿಕರ ಸಂಘಟನೆ ಅಸ್ತಿತ್ವಕ್ಕೆ

[ಒಂದನೇ ಪುಟದಿಂದ]

ಉಪಾಧ್ಯಕ್ಷ ಕಾಂ. ಹರೇಕಿಷನ್‌ಸಿಂಗ್ ಸುರ್ಜೀತ್ ಮತ್ತು ಪ್ರಧಾನಕಾರ್ಯದರ್ಶಿ ಕಾಂ. ಚಾತುನ್ನಿ ಮಾಸ್ಟರ್ ಇವರುಗಳು ಹಾಲ್ಗೊಂಡು ಮಾರ್ಗದರ್ಶನ ನೀಡಿದರು.

ಧ್ಯೇಯೋದ್ದೇಶಗಳು

1. ಜಮೀನ್ದಾರೀ ಪದ್ಧತಿಯ ನಿರ್ಮೂಲನ ಹಾಗೂ ಉಚಿತವಾಗಿ ಭೂರಹಿತ ಕೃಷಿಕೂಲಿಗಳಿಗೆ ಭೂಮಿ ಹಂಚಿಕೆ.

2. ದೇಶೀಯ ಹಾಗೂ ವಿದೇಶಿ ಏಕಸ್ವಾಮ್ಯಗಳಿಂದ ನಡೆದಿರುವ ಶೋಷಣೆಯ ಅಂತ್ಯ.

3. ಗ್ರಾಮಾಂತರ ಜನತೆಯ ಜೀವನಮಟ್ಟ ಏರಿಸುವುದು, ಕಾರ್ಮಿಕರ ದುಡಿಮೆಯ ಸ್ಥಿತಿಯನ್ನು ಸುಧಾರಿಸುವುದು, ಸಾಂಸ್ಕೃತಿಕವಾಗಿ ಜನತೆಯನ್ನು ಜಾಗೃತಗೊಳಿಸುವುದು.

4. ರಾಜ್ಯಗಳ ಆಡಳಿತ ವ್ಯವಸ್ಥೆಯನ್ನು ಪ್ರಜಾಪ್ರಭುತ್ವೀಕರಿಸುವುದು.

5. ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟ ಮತ್ತು ಯುದ್ಧ ಭೀತಿಯ ವಿರುದ್ಧ ಶಾಂತಿ ಚಳುವಳಿ.

ಕೇಂದ್ರ ಸಮಿತಿಯ ಬೆಂಬಲ

[ಒಂದನೇ ಪುಟದಿಂದ]

ಕಾರ್ಮಿಕ ಚಳುವಳಿಯಲ್ಲಿ ಇದೊಂದು ಮಹತ್ವಪೂರ್ಣ ಹೆಜ್ಜೆ. ಮೊಟ್ಟಮೊದಲಬಾರಿಗೆ ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳು, ರಾಷ್ಟ್ರೀಯ ಒಕ್ಕೂಟಗಳು, ಸರಕಾರದ ಮಾಲೀಕತ್ವ ಭೂತ ಆರ್ಥಿಕ ನೀತಿ, ಗುತ್ತೇದಾರಿಗಳಿಗೆ ರಿಯಾಯಿತಿ ತೋರಿಸುವುದು, ಬಹುರಾಷ್ಟ್ರೀಯ ಬಂಡವಾಳಗಾರರನ್ನು ಬಲಪಡಿಸಿಕೊಳ್ಳುತ್ತಿರುವುದರ ವಿರುದ್ಧ ಪ್ರತಿಭಟಿಸಲು ಐಕ್ಯಕಾರ್ಯಾಚರಣೆಗೆ ಕರೆಕೊಟ್ಟಿವೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರಸಮಿತಿಯು ನವೆಂಬರ್ 23ರ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಶ್ರಮಿಸುವಂತೆ ತನ್ನೆಲ್ಲ ಘಟಕಗಳಿಗೆ ಕರೆನೀಡಿದೆ. ಅಲ್ಲದೇ ಈ ಕಾರ್ಯಕ್ರಮವನ್ನು ಬೆಂಬಲಿಸುವಂತೆ ಎಲ್ಲ ರಾಜಕೀಯ ಪಕ್ಷಗಳಿಗೂ ವಿನಂತಿಸಿದೆ.

ಕಾರ್ಮಿಕರ ಈ ಕಾರ್ಯಕ್ರಮಕ್ಕೆ ಬೆಂಬಲಿಸುವಂತೆ ವಿದ್ಯಾರ್ಥಿಗಳು ಯುವಜನರು, ಮಹಿಳಾ ಸಂಘಟನೆಗಳನ್ನು ಕೇಂದ್ರಸಮಿತಿ ವಿನಂತಿಸಿದೆ.

ತಿದ್ದುಪಡಿ

ಕಳೆದ ವಾರದ ಪತ್ರಿಕೆಯ (1-11-81)ದ 2ನೇ ಪುಟದ (ಕರ್ನಾಟಕದಲ್ಲಿ ರೈತಸಂಘಟನೆಯ ಆರಂಭದ ಘಟ್ಟಗಳ ಕುರಿತು ಕೆಲವು ವಿಚಾರಗಳು ಲೇಖನ) 3ನೇ ಕಾಲಂನ 3ನೇ ಪ್ಯಾರಾದಲ್ಲಿ ಕರ್ನಾಟಕ ಭೂಸುಧಾರಣಾ ಕಾಯ್ದೆ ಜಾರಿಗೆ ಬಂದಿದ್ದು 1947 ಮಾರ್ಚ್ ಎಂದಿದೆ. ಇದನ್ನು 1974 ಮಾರ್ಚ್ ಎಂತಲೂ, ಅದೇ ಪುಟದ 5ನೇ ಕಾಲಂ ಆರಂಭದಲ್ಲಿ ರೈತಸಂಘವನ್ನು ಪುನರುಜ್ಜೀವನಗೊಳಿಸಿದ್ದು 1948 ಎಂದಿದೆ. ಇದನ್ನು 1978 ಎಂದು ಓದಿಕೊಳ್ಳಬೇಕು.

ಕಳೆದ ವಾರದ ಪತ್ರಿಕೆಯಲ್ಲಿ ಕೆಲವು ಮುದ್ರಣದೋಷಗಳು ಉಳಿದುಕೊಂಡದ್ದಕ್ಕಾಗಿ ವಿಷಾದಿಸುತ್ತೇವೆ.

ಐಕ್ಯರಂಗಕ್ಕೆ

ಚಂದಾದಾರರಾಗಿರಿ

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053, Editorial and managerial office : L-56, K. V. Temple Street, Sultanpet Bangalore-560 053. Phone-24154

EDITOR : M. K. BHAT